# ನಾದನೂಪುರ ವಂಡಾರು

# Nadanoopura Vandaru


ಮುಖ್ಯಸ್ಥರು – ವಂಡಾರು ಗೋವಿಂದ
97418 47278
ಪ್ರಧಾನ ಸಂಪಾದಕರು – ಶುಭಾಶಯ
ಗೌರವ ಸಂಪಾದಕರು – ಅಜಿತ್ ಕಾರಂತ್
94496 86807

Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – https://nyt.1ngo.in/




ನಮ್ಮ ಸಮಸ್ತ ಓದುಗರಿಗೆ ಶರನ್ನವರಾತ್ರಿ ಹಬ್ಬದ ಹಾರ್ದಿಕ ಶುಭಾಶಯಗಳು


ಪರಿವಿಡಿ

ಬೋರ್ಡ್ ರೂಮ್
ಸಂಪಾದಕೀಯ
ಯಕ್ಷಗಾನದ ಶ್ರೇಷ್ಠ ಪ್ರಶಸ್ತಿ – ಪಾರ್ತಿ ಸುಬ್ಬ ಪ್ರಶಸ್ತಿ
ದೈವದ ಪಾತ್ರಗಳು ಯಕ್ಷಗಾನಕ್ಕೆ
ಮನೋಹರ್ ಕುಂದರ್ ಚಿತ್ರ–ಕಥೆ
ಯಕ್ಷಗಾನ ಪ್ರಸಂಗ ಸಾಹಿತ್ಯ ಮತ್ತು ಪ್ರಕ್ಷಿಪ್ತ ಪ್ರಸಂಗಗಳು
ಧೀರ ಕಲೆಯೊಳಗೆ ಕೀರವಾಣಿಯರು – ಶ್ರೀಮತಿ ಪೂರ್ಣಿಮಾ ಯತೀಶ್ ರೈ
ಕಾಡುವ ಪಾತ್ರ – 1. ಅಂಬಾ ಪ್ರಸಾದ್ ಭಟ್ ಪಾತಾಳ
2. ದಯಾನಂದ ನಾಗೂರು
ನಮ್ಮ ಲೈಬ್ರರಿ – ಭಸ್ಮಾಸುರ ಮೋಹಿನಿ ಪ್ರಸಂಗ ಸಾಹಿತ್ಯ
ಶೋಭಾಯಾತ್ರೆ ಟ್ಯಾಬ್ಲೋ ದಲ್ಲಿ ಯಕ್ಷಗಾನ ಪ್ರದರ್ಶನ
ಚಾರಿಟಿ ರೂಮ್


## ಬೋರ್ಡ್ ರೂಂ



ಗೋವಿಂದ ವಂಡಾರು

**ಆತ್ಮೀಯರೇ,**

ನಮ್ಮ ಸಕಲ ಓದುಗರಿಗೆ ಶರನ್ನವರಾತ್ರಿ ಹಬ್ಬದ ಹಾರ್ದಿಕ ಶುಭಾಶಯಗಳು.

ಅಕ್ಟೋಬರ್ ಕೊನೆಯ ವಾರ ಅಥವ ನವಂಬರ್ ತಿಂಗಳಿನಲ್ಲಿ ಯಾವ ಮೇಳಗಳಲ್ಲಿ ಯಾವ ಕಲಾವಿದರು ಕಾಣಿಸಿಕೊಳ್ಳಲಿದ್ದಾರೆ. ಯಾರು ಎಲ್ಲಿಗೆ ಸೇರ್ಪಡೆಯಾಗಿದ್ದಾರೆ, ಎಲ್ಲಿಂದ ನಿರ್ಗಮಿಸುತ್ತಿದ್ದಾರೆ ಇವೆಲ್ಲ ವಿವರಗಳು ಹೊರ ಬೀಳುತ್ತವೆ. ಸಾಮಾನ್ಯವಾಗಿ ಕಲಾವಿದರಿಗೆ ಮೇಳದ ಜೊತೆಗಿನ ಒಪ್ಪಂದ ಹಿಂದಿನ ವರ್ಷವೇ ಮೇಳ ಹೊರಟಾಗ ನಿಗದಿಯಾಗಿರುತ್ತದೆ. ಕಲಾವಿದನ ಸಂಬಳ, ಮೇಳದ ನಿಯಮಗಳು ಇವೆಲ್ಲಕ್ಕೂ ಕಲಾವಿದ ಬದ್ಧನಾಗಿರಬೇಕಾಗುತ್ತದೆ. ಮೇಳದ ಪಟ್ಟಿ ಹೊರ ಬೀಳುವ ಸಂದರ್ಭ ಪ್ರೇಕ್ಷಕ ವಲಯದಲ್ಲಿ ಕಲಾವಿದರ ಬದಲಾವಣೆಯ ಬಗ್ಗೆ ಕುತೂಹಲ, ಊಹಾಪೋಹ, ಚರ್ಚೆಗಳಾಗುವುದು ಸರ್ವೇ ಸಾಮಾನ್ಯ. ಇದು ಕಲಾವಲಯದ ಸಹಜ ಪ್ರಕ್ರಿಯೆ. ಈ ಬದಲಾವಣೆಯ ಸಂದರ್ಭದಲ್ಲಿ ಕಲಾವಿದ ಎದುರಿಸಬೇಕಾದ ಸನ್ನಿವೇಶ ಹಾಗೂ ಅದನ್ನು ನಿಭಾಯಿಸಬೇಕಾದ ಮಾನಸಿಕ ಸ್ಥಿತಿಯನ್ನು ಹಂಚಿಕೊಳ್ಳುವ ಸಣ್ಣ ಪ್ರಯತ್ನ ಮಾಡಿದ್ದೇನೆ.

ಸಾಮಾನ್ಯವಾಗಿ ಇತ್ತಿಚಿನ ವ್ಯವಸ್ಥೆ ಹೇಗಿದೆಯೆಂದರೆ, ಮೇಳದಲ್ಲಿರುವ ಕಲಾವಿದರ ಮೇಲೆ ಪ್ರಸಂಗ ಹಾಗೂ ಪಾತ್ರಗಳನ್ನು ರೂಪಿಸುವ ಸ್ಥಿತಿ ಇದೆ. ಅದರಲ್ಲೂ ಮುಖ್ಯ ಕೆಲವು ಪಾತ್ರಧಾರಿಗಳನ್ನು ಗಮನಿಸಿಯೇ ಪ್ರಸಂಗ ಕಥೆ ರೂಪುಗೊಳ್ಳುತ್ತದೆ. ಕಲಾವಿದ ಮೇಳ ಬದಲಾವಣೆ ಮಾಡಿದಾಗ ಪೌರಾಣಿಕ ಪ್ರದರ್ಶನಗಳಲ್ಲಿ ಯಾವುದೇ ಸಮಸ್ಯೆಗಳಾಗುವುದಿಲ್ಲ. ಆದರೆ ಕಾಲ್ಪನಿಕ ಪ್ರಸಂಗಗಳಲ್ಲಿ ಒಂದು ಪಾತ್ರವನ್ನು ಒಬ್ಬ ಕಲಾವಿದ ನಿರ್ವಹಿಸುತ್ತಿದ್ದರೆ ಅದೇ ಪಾತ್ರವನ್ನು ಬೇರೆ ಕಲಾವಿದ ನಿರ್ವಹಿಸಿದಾಗ ಕೆಲವೊಮ್ಮೆ ಪ್ರೇಕ್ಷಕರು ಹೋಲಿಕೆ ಮಾಡಿ ನೋಡುವುದಿದೆ. ಹಿಂದಿನ ಕಲಾವಿದನ ಸ್ಥಾನದಲ್ಲಿ ಹೊಸ ಕಲಾವಿದನ ಪಾತ್ರ ನಿರ್ವಹಣೆ ಕೆಲವೊಮ್ಮೆ ಸ್ವಿಕರಿಸಲ್ಪಡುತ್ತೆ, ಕೆಲವೊಮ್ಮೆ ಇಲ್ಲ. ವೈಯುಕ್ತಿವಾಗಿ ಮೇಳ ಬದಲಾಯಿಸಿದಾಗ ಕಲಾವಿದನಿಗೆ ಸವಾಲುಗಳೆಂದರೆ ಹೊಸ ಮೇಳದಲ್ಲಿ ಅಲ್ಲಿನ ರಂಗ ನಡೆ, ಪ್ರಸಂಗ ಕ್ರಮ ಸಹಕಲಾವಿದರೊಂದಿಗೆ, ಪ್ರಸಂಗಕರ್ತ, ನಿರ್ದೇಶಕ, ಭಾಗವತರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಕೆಲವು ಸಮಯ ತೆಗೆದುಕೊಳ್ಳುತ್ತದೆ. ಪ್ರಯೋಜನವೆಂದರೆ, ಹೊಸ ಕಲಿಕೆಗಳಿಗೆ ಅವಕಾಶವಾಗುತ್ತದೆ. ಕಲಾವಿದನ ಅನುಭವ ವಿಸ್ತಾರವಾಗ್ತಾ ಹೋಗುತ್ತದೆ. ಕಲಾವಿದನ ಮೇಲೆ ವೈಯುಕ್ತಿಕ ಅಭಿಮಾನ ಯಾವತ್ತಿಗೂ ಕಲಾವಿದನಿಗೆ ತೊಂದರೆಯೇ. ಬೇಡಿಕೆಯ ಕಲಾವಿದ ಮೇಳ ಬಿಟ್ಟಾಗ ಕಲಾವಿದ ಮೇಲೋ ಮೇಳದ ಮೇಲೋ ಅಪಪ್ರಚಾರ ಮಾಡುವುದು ಇಂತಹ ಘಟನೆಗಳು ಅಭಿಮಾನಿಗಳಿಂದ ನಡೆದುಬಿಡುತ್ತವೆ. ಅಭಿಮಾನ ಹೆಚ್ಚಾದಾಗ ಕಲಾವಿದನ ತಪ್ಪುಗಳನ್ನು ಗುರುತಿಸಲು ಮುಂದಾಗುವುದಿಲ್ಲ. ಕಲೆ ಹಾಗೂ ಮೇಳದ ಮೇಲಿನ ಅಭಿಮಾನ ಒಳ್ಳೆಯದು. ಅಭಿಮಾನ ಕಲಾವಿದನ ಬೆಳವಣಿಗೆಗೆ ಅನುಕೂಲವಾಗುವಂತಿರಬೇಕು. ಮೇಳದಿಂದ ಭಾಗವತ ಅಥವಾ ವೇಷಧಾರಿ ಬದಲಾವಣೆಯಾದಾಗ ಮೇಳ ಮುನ್ನಡೆಸುವವರನ್ನು, ಕಲಾವಿದರನ್ನು, ವೈಯುಕ್ತಿಯವಾಗಿ ಟೀಕೆ ಮಾಡದೇ ಆವೇಶ, ಆಕ್ರೋಶದ ಮಾತುಗಳನ್ನಾಡದೇ ಕಲಾವಿದನದೂ ಬದುಕಿಗಾಗಿ ದುಡಿಮೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಆ ಬದಲಾವಣೆಗಳನ್ನು ಸಹಜವಾಗಿ ಸ್ವೀಕರಿಸಬೇಕು ಹಾಗೂ ಅದರ ಬದಲು ಕಲಾವಿದನ ಸಾಧನೆ ಕೃತಿಗೆ ಬೆಂಬಲ ಕೈಜೋಡಿಸುವಂತಹಾ ಕೆಲಸ ನಿಜವಾದ ಕಲಾಭಿಮಾನಿಯಿಂದ ಆಗಬೇಕಿದೆ. ಎಲ್ಲ ಮೇಳಗಳ ಮುಂದಿನ ಆರು ತಿಂಗಳ ತಿರುಗಾಟ ಸುಖಪ್ರದವಾಗಿರಲಿ ಎಂದು ಆಶಿಸ್ತೇನೆ. ನಮಸ್ಕಾರ– ***ಗೋವಿಂದ ವಂಡಾರು***


**ನಾದ ನೂಪುರ ಡಿಜಿಟಲ್ ಯಕ್ಷ ಪತ್ರಿಕಾ ಬಳಗ**

**ವಂಡಾರು ಗೋವಿಂದ | ಶುಭಾಶಯ | ಅಜಿತ್ ಕಾರಂತ್ | ಪ್ರೊ. ಉದಯ್ ಕುಮಾರ್ ಶೆಟ್ಟಿ | ರವಿ ಮಡೋಡಿ | ಎಂ ಶಾಂತಾರಾಮ್ ಕುಡ್ವ | ಸಾಯಿಸುಮ ಎಂ ನಾವಡ | ಉಮೇಶ್ ಶಿರೂರ್**

**ನ್ಯೂಸ್ ಲೇಟರ್ ವಿನ್ಯಾಸ – ಶುಭಾಶಯ**

**ಸಂಪಾದಕೀಯ**


***ಎಲ್ಲರಿಗೂ ಹಾಸ್ಯ ಮಾಡಲು ಸಾಧ್ಯವೂ ಇಲ್ಲ.***

**ಹಾಸ್ಯ.** ನವರಸಗಳಲ್ಲಿ ಒಂದು ಪ್ರಧಾನವಾದ ರಸ ಇದು. ಮನರಂಜನಾತ್ಮಕ ಕಲೆಗಳಲ್ಲಿ ಹಾಸ್ಯಕ್ಕೆ ಅದರದ್ದೇ ಆದ ವೈಶಿಷ್ಟ್ಯವಿದೆ. ಯಾರಿಗೇ ಆಗಲಿ ಮನಸಿಗೆ ಖೇದ ಬೇಸರ ಅನಿಸಿದಾಗ, ಹಾಸ್ಯವೆನ್ನುವುದು ಟಾನಿಕ್ ರೀತಿಯಲ್ಲಿ ಮನಸಿನ ಮೇಲೆ ಪರಿಣಾಮ ಬೀರುತ್ತದೆ. ಇತ್ತೀಚಿಗಿನ ಕಾಲ್ಪನಿಕ ಪ್ರಸಂಗಗಳಲಿ ಹಾಸ್ಯವೇ ಪ್ರಧಾನವಾಗಿರಬೇಕು ಎಂಬ ಬೇಷರತ್ ನಿಯಮ ಬೆಳೆದುಕೊಂಡಿದೆ. ಹಾಸ್ಯ ಪಾತ್ರಧಾರಿಗಳ ಸ್ಟಾರ್ ವಾಲ್ಯೂ ನೋಡೋದಾದ್ರೂ ಯಾವುದೇ ತಾರೆಯರಿಗೂ ಯಕ್ಷಗಾನ ವಿದೂಷಕರು ಕಮ್ಮಿ ಇಲ್ಲ. ಯಕ್ಷಗಾನದಲ್ಲಿ ಹಾಸ್ಯ ನಮ್ಮ ಸುತ್ತಮುತ್ತಲಿನ ವಿಚಾರಗಳ ಮೇಲೆಯೇ ಸಂಭಾಷಣೆಗೆ ತೆಗೆದುಕೊಂಡು ಹಾಸ್ಯ ಸೃಷ್ಟಿಸುತ್ತಾರೆ. ಆದರೆ ಹಾಸ್ಯ ಮಾಡುವುದು ಖಂಡಿತ ಸುಲಭದ ಕೆಲಸವಲ್ಲ. ರಂಜನೆಯ ಹಾಸ್ಯ ಒಂದು ಮಿತಿಯನ್ನು ಮೀರಿ ಹೋಗಬಾರದು. ಆ ರೀತಿ ಹೋದರೆ ಅಪಾರ್ಥ, ಅಶ್ಲೀಲ ಹಾಸ್ಯ ಉಂಟಾಗಿ ಮುಜುಗರ ತರುವ ಪರಿಸ್ಥಿತಿಯೂ ಎದುರಾಗುತ್ತದೆ. ಇತ್ತೀಚಿಗೆ ಹಾಸ್ಯವನ್ನು ಲಘುವಾಗಿ ತೆಗೆದುಕೊಂಡವರೇ ಹೆಚ್ಚು. ಹಾಸ್ಯವು ಪೋಲಿ ಜೋಕ್ ಅಥವ ಎರಡರ್ಥದ ಜೋಕ್ ಗಳಾದಾಗ ಒಂದು ಪಾತ್ರದ ಮೌಲ್ಯ, ಪ್ರಬುದ್ಧತೆ ಕಡಿಮೆಯಾಗಿ ಬಿಡುತ್ತದೆ. ಹಾಗಾಗಿ ಇತ್ತೀಚಿಗೆ ರಾಜಕೀಯ, ಪ್ರಚಲಿತ ವಿದ್ಯಮಾನಗಳ ವಿಡಂಬನೆ ಮೊದಲಾಗ ಜೋಕ್ ಗಳು ಯಕ್ಷರಂಗದಲ್ಲಿ ತೂರಿಕೊಂಡಾಗ ಒಮ್ಮೆಗೆ ಅದು ಪ್ರೇಕ್ಷಕರಲ್ಲಿ ನಗೆ ತರಿಸಿದರೂ ಆ ಪಾತ್ರಕ್ಕೆ ಅಂತಹ ಹಾಸ್ಯಗಳ ಸೂಕ್ತವಾಗಿತ್ತಾ? ಅದು ಆ ಪಾತ್ರಕ್ಕೆ ಪೋಷಕವಾಗುವಂತಹಾ ಸಂಭಾಷಣೆಯಾ, ಪ್ರಸಂಗದ ಕಾಲಮಾನ, ಇಂತಹಾ ವಿವೇಚನೆಯಲ್ಲಿದ ಹಾಸ್ಯ – ಕ್ಲಾಸ್ ರೂಮ್ ಜೋಕ್ ಗಿಂತ ಭಿನ್ನವಾಗಿರೋದಿಲ್ಲ. ಅಲ್ಲದೆ ಎಲ್ಲರಿಗೂ ಹಾಸ್ಯ ಮಾಡಲು ಸಾಧ್ಯವೂ ಇಲ್ಲ. ಈ ಮಾತನ್ನೇ ಒತ್ತಿ ಹೇಳ್ತಿದ್ದೇನೆ ಯಾಕಂದ್ರೆ ಪಾತ್ರದ ಚೌಕಟ್ಟಿನಲ್ಲೇ ಅಶ್ಲೀಲವಲ್ಲದ, ಪಾತ್ರದ ಗಾಂಭೀರ್ಯವರಿತು, ನಗೆ ಚಿಮ್ಮಿಸುವಂಥ ಸಂಭಾಷಣೆ, ಹಾವಭಾವ ಪ್ರದರ್ಶಿಸುವುದು ಸವಾಲಿನ ಕೆಲಸವೇ ಸರಿ. ವಿದೂಷಕರಲ್ಲದ ಬೇರೆ ಪಾತ್ರಗಳನ್ನು ನಿರ್ವಹಿಸುವವರೂ ಕೆಲವೊಮ್ಮೆ ಸಾಂದರ್ಭಿಕವಾಗಿ ಹಾಸ್ಯ ಸಂಭಾಷಣೆ ತರೋದಿದೆ. ಆದ್ದರಿಂದ ಹಾಸ್ಯವನ್ನು ವಿದೂಷಕನೇ ಮಾಡಬೇಕೆಂದೇನಿಲ್ಲ, ಸಂದರ್ಭಕ್ಕೆ ಸರಿಯಾಗಿ, ಸನ್ನಿವೇಷ ಅರಿತು ಯಾವ ಪಾತ್ರಗಳೂ ಪ್ರಸಂಗದಲ್ಲಿ ಹಾಸ್ಯ ರಸ ತರಬಹುದು. ಆದರೆ ಸಂಪೂರ್ಣ ಹಾಸ್ಯ ಪಾತ್ರಕ್ಕಾಗಿಯೇ ಗುರುತಿಸಿಕೊಂಡವರು ವಿದೂಷಕರು. ತಮ್ಮ ಹಾವ ಭಾವ, ದೈಹಿಕ ನಿಲುವು, ಮಾತಿನ ಚತುರತೆಗಳಿಂದ ನಗಿಸಲಿಕ್ಕಾಗಿಯೇ ಇರೋ ಕಲಾವಿದರು ಹಾಸ್ಯಗಾರರು. ಇತ್ತೀಚಿಗೆ ಹಾಸ್ಯವೇ ಪ್ರಧಾನ ಅನ್ನೋದು ಅನಿವಾರ್ಯವಾಗಿ ಜನರ ಶೀಟಿ ಚಪ್ಪಾಳೆಗಳಿಗಾಗಿ ರಂಗಸ್ಥಳದಲ್ಲಿ ಮಂಗಚೇಷ್ಟೆಗಳು, ಕಸರತ್ತುಗಳು, ಪ್ರಚಲಿತ ವಿದ್ಯಮಾನಗಳ ಅಣಕುಗಳೇ ಹಾಸ್ಯ ಎನಿಸಿಕೊಂಡು ಬಿಟ್ಟಿದೆ. ಒಟ್ಟಾರೆ ಆಟಕ್ಕೆ ಬಂದ ಪ್ರೇಕ್ಷಕ ನಗಬೇಕು, ಪ್ರೇಕ್ಷಕರಿಗೆ ಕಥೆಯ ಸಂದೇಶ ತಿರುಳು ಮುಖ್ಯವಲ್ಲ. ಇದೇ ವಾಣಿಜ್ಯೀಕರಣದ ಮಂತ್ರವಾಗಿದೆ. ಸಿನಿಮಾಗಳ ರೀತಿ ಯಕ್ಷಗಾನಕ್ಕೂ ಕಂಟೆಂಟೇ ಮುಖ್ಯವಾಗಿದೆ. ಮೇಳದ ಯಜಮಾನರು ಕಲಾವಿದರು ಹೇಳೋ ಆ ಕಂಟೆಂಟೇ ಈ ಹಾಸ್ಯ. ಇದೇ ಕಾರಣದಿಂದಲೋ ಏನೋ ರಾಜಹಾಸ್ಯಗಳು, ನವಿರು ಹಾಸ್ಯಗಳನ್ನು ನೀಡುತ್ತಿದ್ದ ಕಲಾವಿದರು ಮಂಕಾಗಿ ಹೋಗಿದ್ದಾರೆ. ಸುತ್ತಮುತ್ತಲಿನ ಘಟನೆಗಳನ್ನೇ ಕಿಚಾಯಿಸುವ ಹಾಸ್ಯಗಳು ಹಾಸ್ಯ ಮೇಳ, ಹಾಸ್ಯ ವೈಭವಗಳಲ್ಲಿ ಇಂತಹ ಮನರಂಜನೆಗಳು ಬೇಕಾದರೆ ನಡೆಯಲಿ. ಆದರೆ ಗಂಭೀರ ಪ್ರಸಂಗಗಳಲ್ಲಿ ಪಾತ್ರದ ಆಳ ಅಗಲ ಅರಿತು, ಪಾತ್ರೋಚಿತ ಹಾಸ್ಯ ನೀಡೋ ಕಲಾವಿದನ್ನು ಪ್ರೇಕ್ಷಕ ಗುರುತಿಸಬೇಕಿದೆ. ಏನಂತೀರಿ?

ಇದರೊಂದಿಗೆ ಪ್ರಸಂಗ ಸಾಹಿತ್ಯದ ವಿಭಾಗಕ್ಕಿರುವ ಮೌಲ್ಯದ ಬಗ್ಗೆ ಹೇಳಬೇಕಾಗಿದೆ. ಮುಮ್ಮೇಳ, ಹಿಮ್ಮೇಳ, ಸಾಹಿತ್ಯ ಎಂಬ ಮೂರು ಪ್ರಧಾನ ವಿಭಾಗಗಳನ್ನು ಗುರುತಿಸಬಹುದಾದ ಯಕ್ಷಗಾನವೆಂಬ ಕಲೆಯಲ್ಲಿ ಪ್ರಸಂಗ ರಚನೆಗೆ ಸುದೀರ್ಘ ಇತಿಹಾಸವಿದ್ದು, ಅದೆಷ್ಟೋ ಪ್ರಸಂಗಕರ್ತರು ಹಿಂದೆ ಸಂದಿ ಹೋಗಿದ್ದಾರೆ, ಪ್ರಚಲಿತದಲ್ಲಿರೋ ಹಲವಾರು ಪ್ರಸಂಗಕರ್ತರಿದ್ದಾರೆ, ಮುಂದೆಯೂ ಪ್ರಸಂಗ ರಚನೆಯ ಪ್ರಕ್ರಿಯೆ ನಿರಂತರ. ಯಕ್ಷಗಾನ ಸಾಹಿತ್ಯ ವಿಭಾಗದಲ್ಲಿ ಸಾಧನೆ ಮಾಡಿರೋ ಬರಹಗಾರರಿಗೆ ನೀಡಲಾಗುವ ಗೌರವಾನ್ವಿತ ಪ್ರಶಸ್ತಿ ಪಾರ್ತಿಸುಬ್ಬ ಪ್ರಶಸ್ತಿ. 2021–2022 ನೇ ಸಾಲಿನ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಹಾಗೂ ಪಾರ್ತಿಸುಬ್ಬ ಪ್ರಶಸ್ತಿ ಪ್ರಕಟವಾಗಿದ್ದು ಸಲ್ಲಬೇಕಾದ ಯೋಗ್ಯ ಸಾಧಕರಿಗೇ ಪ್ರಶಸ್ತಿ ಲಭಿಸಿದೆ. ಈ ಹಿನ್ನಲೆಯಲ್ಲಿ ಪಾರ್ತಿಸುಬ್ಬ ಪ್ರಶಸ್ತಿಯ ಮಹತ್ವ ಹಾಗೂ ಹಿನ್ನಲೆ ಕುರಿತ ಪ್ರಧಾನ ಲೇಖನ ಈ ಸಂಚಿಕೆಯಲ್ಲಿ ಪ್ರಕಟವಾಗಿದೆ. ಅಲ್ಲದೇ ಮನೋಹರ್ ಕುಂದರ್ ರವರ ಯಕ್ಷ–ಚಿತ್ರಲೋಕ, ಪ್ರಕ್ಷಿಪ್ತ ಪ್ರಸಂಗಗಳ ಇತಿಹಾಸ, ಯಕ್ಷಗಾನ ಪ್ರಸಂಗಗಳಲ್ಲಿ ದೈವಾರಾಧನೆಯ ಪ್ರವೇಶಿಕೆಯ ಕುರಿತು ಒಂದು ಕಿರು ಚಿತ್ರಣ ನೀಡೋ ಪ್ರಯತ್ನ ಮಾಡಲಾಗಿದೆ. ಓದಿ ನಿಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಿ – ***ಶುಭಾಶಯ, ಪ್ರಧಾನ ಸಂಪಾದಕರು***

## ಯಕ್ಷಗಾನದ ಶ್ರೇಷ್ಠ ಪ್ರಶಸ್ತಿ – ಪಾರ್ತಿ ಸುಬ್ಬ ಪ್ರಶಸ್ತಿ

ಯಕ್ಷಗಾನಕ್ಕೊಂದು ಆಯಾಮವನ್ನು ಹಾಕಿಕೊಟ್ಟ ಪಾರ್ತಿಸುಬ್ಬ ಕವಿಯ ಹೆಸರಿನಲ್ಲಿ ಕರ್ನಾಟಕ ಸರಕಾರದ ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು 2009 ನೇ ಇಸವಿಯಿಂದ ವಾರ್ಷಿಕ ವಿಶೇಷ 'ಪಾರ್ತಿಸುಬ್ಬ ಪ್ರಶಸ್ತಿ'ಯನು ಕೊಡಮಾಡುತ್ತಿದೆ.



ಪಾರ್ತಿಸುಬ್ಬ

**ಪಾರ್ತಿಸುಬ್ಬ :**

ಕುಂಬಳೆಯ ಕವಿ ಪಾರ್ತಿಸುಬ್ಬ ಎಂಬುದು ಯಕ್ಷಗಾನದ ಕ್ಷೇತ್ರದ ಚಿರಪರಿಚಿತ ಹೆಸರು. ಆತ ಬರೆದ ಪ್ರಸಂಗಗಳು ಯಕ್ಷಗಾನ ಕ್ಷೇತ್ರವನ್ನು ಗಟ್ಟಿಗೊಳಿಸಿವೆ ಎಂದರೆ ಖಂಡಿತಾ ತಪ್ಪಾಗುವುದಿಲ್ಲ. ಆತ ಒಂದರ್ಥದಲ್ಲಿ ಯಕ್ಷಗಾನದ ಮೂಲಪುರುಷ. ಇವನ ತಾಯಿ ಪಾರ್ವತಿ. ಪಾರ್ವತಿಯ ಮಗ ಪಾರ್ತಿಸುಬ್ಬ. ಈತನ ಕಾಳದ ಕುರಿತಾಗಿ ಭಿನ್ನಾಭಿಪ್ರಾಯಗಳಿವೆ. 1750–1830 ಎಂಬುದು ಕೆಲವರ ಅಭಿಪ್ರಾಯ. ಒಟ್ಟಾರೆ ಅಂದಾಜಿನಲ್ಲಿ 17–18 ನೇ ಶತಮಾನ ಎನ್ನಬಹುದಷ್ಟೇ. 'ಯಕ್ಷರಂಗದ ವಾಲ್ಮೀಕಿ' ಎಂಬ ಹೆಸರೂ ಇವನಿಗಿದೆ. "ಕುಂಬಳೆಯ ಕವಿ ಪಾರ್ತಿಸುಬ್ಬನು ಈ ಕಣಿಪುರ ಕೃಷ್ಣ ದೇವಸ್ಥಾನದಲ್ಲಿ ಪಾಟಾಳಿಯಾಘಿದ್ದವನೆಂದೂ ರಾಮಾಯಣಾದಿ ಅನೇಕ ಯಕ್ಷಗಾನಗಳನ್ನೂ ಸಭಾಲಕ್ಷಣ ಶಾಸ್ತ್ರ ಗ್ರಂಥವನ್ನೂ ರಚಿಸಿ, ಕೇರಳದ ಕಥಕ್ಕಳಿಯ ಆದರ್ಶದಿಂದ ತುಳುನಾಡಿನಲ್ಲಿ ಯಕ್ಷಗಾನದ ಶಾಸ್ತ್ರೀಯ ಸಂಪ್ರದಾಯವನ್ನು ರೂಢಿಗೆ

ತಂದವನೆಂದೂ ಪ್ರತೀತಿಯಿದೆ" – ಎಂದು ಕುಕ್ಕಿಲ ಕೃಷ್ಣ ಭಟ್ಟರಿಂದ ಸಂಪಾದಿಸಲ್ಪಟ್ಟ 'ಪಾರ್ತಿಸುಬ್ಬನ ಯಕ್ಷಗಾನಗಳು' ಕೃತಿಯ ಪೀಠಿಕಾ ಭಾಗದಿಂದ ತಿಳಿದುಬರುತ್ತದೆ.

***ಈತನ ಕೃತಿಗಳು*** – ರಾಮಾಯಣಾಧಾರಿತ ಪ್ರಸಂಗಗಳಾದ ಪುತ್ರಕಾಮೇಷ್ಟಿ, ಸೀತಾ ಕಲ್ಯಾಣ, ಪಟ್ಟಾಭಿಷೇಕ, ಪಂಚವಟಿ, ವಾಲಿ ಸಂಹಾರ, ಉಂಗುರಸಂಧಿ, ಸೇತುಬಂಧನ, ಅಂಗದ ಸಂಧಾನ, ಕುಂಭಕರ್ಣಾದಿ ಕಾಳಗ, ಕುಶಲವರ ಕಾಳಗ, ಶ್ರೀಕೃಷ್ಣ ಬಾಲಲೀಲೆ, ಕೃಷ್ಣ ಜನನ, ಗೋಪಿ ವಸ್ತ್ರಾಪಹರಣದವರೆಗಿನ ಕಥಾಭಾಗವನ್ನಾಧರಿಸಿದ ಕೃಷ್ಣಚರಿತೆ, ಐರಾವತ ಎಂಬ ಪ್ರಸಂಗಗಳು. ಯಕ್ಷಗಾನ ಪೂರ್ವರಂಗದ ಸಭಾಲಕ್ಷಣ. ಪಾರ್ತಿಸುಬ್ಬನ ಪ್ರಸಂಗಗಳು ಜೈಮಿನಿ ಭಾರತ, ತೊರವೆ ರಾಮಾಯಣ, ಕೃಷ್ಣಚರಿತೆಗಳಿಂದ ಪ್ರಭಾವಿತವಾಗಿವೆ ಎಂಬುದು ವಿದ್ವಾಂಸರ ಅಭಿಪ್ರಾಯ.

***ಪಾರ್ತಿಸುಬ್ಬ ಪ್ರಶಸ್ತಿ :***

ಯಕ್ಷಗಾನಕ್ಕೊಂದು ಆಯಾಮವನ್ನು ಹಾಕಿಕೊಟ್ಟ ಪಾರ್ತಿಸುಬ್ಬ ಕವಿಯ ಹೆಸರಿನಲ್ಲಿ ಕರ್ನಾಟಕ ಸರಕಾರದ ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು 2009ನೇ ಇಸವಿಯಿಂದ ವಾರ್ಷಿಕ ವಿಶೇಷ 'ಪಾರ್ತಿಸುಬ್ಬ ಪ್ರಶಸ್ತಿ'ಯನು ಕೊಡಮಾಡುತ್ತಿದೆ. ಅಕಾಡೆಮಿಯ ವಾರ್ಷಿಕ ಅನುದಾನದಲ್ಲೇ ಒಂದು ಲಕ್ಷ ರೂಪಾಯಿಗಳ ಮೊತ್ತದೊಂದಿಗೆ ಸಮಗ್ರ ಯಕ್ಷಗಾನ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸಿದವರಿಗೆ ಈ ಪ್ರಶಸ್ತಿಯನ್ನು ಕೊಡುತ್ತಿದೆ.

***'ಪಾರ್ತಿಸುಬ್ಬ ಪ್ರಶಸ್ತಿ'ಗೆ ಪರಿಗಣಿಸುವ ಕೆಲವು ಮಾನದಂಡಗಳು*** –

- ಪಾರ್ತಿಸುಬ್ಬ ಪ್ರಶಸ್ತಿಯನ್ನು ಪಡೆಯುವವರು ಯಕ್ಷಗಾಣ ಕ್ಷೇತ್ರದಲ್ಲಿ ಗಣನೀಯ ಸೇವೆಯನ್ನು ಮಾಡಿರಬೇಕು.
- ಈ ಸೇವೆಯು ಸಂಶೋಧನಾತ್ಮಕ ಅಥವಾ ಸಾಹಿತ್ಯಿಕ ಅಥವಾ ಕಲಾತ್ಮಕ ಮೌಲ್ಯವನ್ನು ಹೊಂದಿರಬೇಕು.
- ಸಾಕಷ್ಟು ವ್ಯಾಪಕವಾಗಿ ಯಕ್ಷಗಾನ ಕ್ಷೇತ್ರದಲ್ಲಿ ಪರಿಚಿತರಾಗಿರಬೇಕು.
- ರಂಗದ ಹಿಮ್ಮೇಳ ಅಥವಾ ಮುಮ್ಮೇಳದಲ್ಲಿ ಭಾಗವಹಿಸುವವರಾಗಿರುವುದು ಅಪೇಕ್ಷಣೀಯ.
- ವಯಸ್ಸು ಸುಮಾರು 50 ದಾಟಿರುವುದು ಅಪೇಕ್ಷಣೀಯ ಆದರೆ ಅನಿವಾರ್ಯವಾಗಬೇಕಿಲ್ಲ.
- ಯಕ್ಷಗಾನಕ್ಕೆ ಸಂಧಿಸಿ ಪ್ರಸಂಗಗಳನ್ನು/ಸಾಹಿತ್ಯ ಕೃತಿಗಳನ್ನು/ವಿಮರ್ಶಾ ಕೃತಿಗಳನ್ನು ರಚಿಸಿರಬೇಕು.
- ಈ ಕೃತಿಗಳು ಪ್ರಸಂಗ ಸಾಹಿತ್ಯ, ಕಲಾಪ್ರದರ್ಶನ ಅಥವಾ ಈ ಕಲೆಯ ಕುರಿತಾದ ಅಧ್ಯಯನಕ್ಕೆ ಸಂಬಂಧಿಸಿದವುಗಳಾಗಿರಬೇಕು.

**'ಪಾರ್ತಿಸುಬ್ಬ ಪ್ರಶಸ್ತಿ'ಗೆ ಭಾಜನರಾದವರು:**

***ಡಾ. ಅಮೃತ ಸೋಮೇಶ್ವರ – 2009***


ವೃತ್ತಿಯಲ್ಲಿ ಪ್ರಾಧ್ಯಾಕರಾಗಿದ್ದವರು. ಕನ್ನಡ–ತುಳು ಲೇಖಕರು, ಯಕ್ಷಗಾನ ಪ್ರಸಂಗಕರ್ತರು, ಸಂಶೋಧಕರು. ಅಮರಶಿಲ್ಪ, ಸಹಸ್ರಕವಚ ಮೋಕ್ಷ, ಕಾಯಕಲ್ಪ, ಮಹಾಶುರ ಭೌಮಾಸುರ, ಮಹಾಕಲಿ ಮಗಧೇಂದ್ರ, ಅಂಧಕ ಮೋಕ್ಷ, ವೀರ ಕಲ್ಕುಡ, ವಂಶವಾಹಿನಿ, ಪಾದುಕಾ ಪ್ರದಾನ ಮುಂತಾದ ಯಕ್ಷಗಾನ ಪ್ರಸಂಗಗಳು. ಯಕ್ಷಗಾಣ ಕೃತಿ ಸಂಪುಟ, ಯಕ್ಷಾಂದೋಳ, ಯಕ್ಷತರು , ಯಕ್ಷಗಾನದ ಹೆಜ್ಜೆ ಗುರುತುಗಳು ಮುಂತಾದ ಯಕ್ಷಗಾನ ಸಂಬಂಧೀ ಕೃತಿಗಳನ್ನೂ ರಚಿಸಿದ್ದಾರೆ.

***ಶ್ರೀ ಹೊಸ್ತೋಟ ಮಂಜುನಾಥ ಭಾಗವತರು – 2010***

ಯಕ್ಷಗಾನದ ಪ್ರಖ್ಯಾತ ಭಾಗವತರು. ಜೊತೆಗೆ ಯಕ್ಷಗಾನ ಪ್ರಸಂಗಕರ್ತರು, ಯಕ್ಷಗಾನ ಸಂಶೋಧಕರೂ ಹೌದು. ರಾಮಾಯಣ, ಮಹಾಭಾರತ, ಭಾಗವತ, ಮ್ಯಾಕ್ ಬೆತ್ ಅನ್ನು ಆಧರಿಸಿ 'ಮೇಘಕೇತ', 'ಆಲ್ ಈಸ್ ವೆಲ್, ದಟ್ ಎಂಡ್ಸ್ ವೆಲ್' ಆಧರಿಸಿ 'ಗುಣಪನ ಕಲ್ಯಾಣ', ಹೋಮರನ ಕಾವ್ಯವನ್ನಾಧರಿಸಿ 'ಉಲ್ಲಾಸದತ್ತ ಚರಿತ್ರೆ', ಕಾಳಿದಾಸನ ಮೇಘದೂತ, ಶಾಕುಂತಲವನ್ನಾಧರಿಸಿದ ಪ್ರಸಂಗಗಳು, ಭಾಸನ ಕೃತಿಗಳನ್ನಾಧರರಿಸಿದ ಪ್ರಸಂಗಗಳು ಮುಂತಾದ ಅನೇಕ ಸಂಗತಿಗಳನ್ನಾಧರಿಸಿ ಸುಮಾರು 250ಕ್ಕೂ ಮಿಕ್ಕಿ ಪ್ರಸಂಗಗಳನ್ನು ರಚಿಸಿದ್ದಾರೆ. ಇಷ್ಟು ಮಾತ್ರವಲ್ಲದೇ 'ಯಕ್ಷಗಾನ ಶಿಕ್ಷಣ–ಲಕ್ಷಣ' ಎಂಬ ಗ್ರಂಥವೂ ಪ್ರಕಾಶಿತವಾಗಿದೆ. ಅನೇಕ ಯಕ್ಷಗಾನ ಸಂಬಂಧಿತ ಗೋಷ್ಠಿಗಳಲ್ಲೂ ಮಾತನಾಡಿದ ಅನುಭವ ಇವರದು.




*ಡಾ. ಅಮೃತ ಸೋಮೇಶ್ವರ*



*ಹೊಸ್ತೋಟ ಮಂಜುನಾಥ ಭಾಗವತ*



*ಕಡತೋಕ ಮಂಜುನಾಥ ಭಾಗವತರು*



*ಡಾ.ಶಿಮಂತೂರು ನಾರಾಯಣ ಶೆಟ್ಟಿ*

***ಶ್ರೀ ಕಡತೋಕ ಮಂಜುನಾಥ ಭಾಗವತರು – 2011***

ತೆಂಕು–ಬಡಗು ಎರಡೂ ತಿಟ್ಟುಗಳಲ್ಲಿ ನಿಪುಣರಾದ ಭಾಗವತರು. ಕಂಚಿನ ಕಂಠದ ಭಾಗವತರೆಂದೇ ಪ್ರಸಿದ್ಧರು. ತಮ್ಮ ಇಪ್ಪತ್ತರ ಹರೆಯದಲ್ಲೇ ಯಕ್ಷಗಾನ ಪತ್ರಿಕೆ ಆರಂಭಿಸಿದವರು. ಯಕ್ಷಗಾನ ಸಂಬಂಧಿ ಲೇಖನಗಳನ್ನೂ ಬರೆದಿದ್ದಾರೆ. ಯಕ್ಷರಂಗದ ಅನೇಕ ಹಿಮ್ಮೇಳ –ಮುಮ್ಮೇಳ ಕಲಾವಿದರನ್ನು ಬೆಳೆಸಿದವರು. ಅನೇಕ ಪ್ರಸಂಗಕರ್ತರ ಯಕ್ಷಗಾನ ಪ್ರಸಂಗಗಳನ್ನು ರಂಗದಲ್ಲಿ ಮೆರೆಸಿದ್ದಲ್ಲದೇ ಸ್ವತಃ ಪ್ರಸಂಗಗಳನ್ನೂ ರಚಿಸಿದವರು.

***ಡಾ.ಶಿಮಂತೂರು ನಾರಾಯಣ ಶೆಟ್ಟಿ – 2012***

ಯಕ್ಷಗಾನ ಛಾಂದಸರು, ಪ್ರಸಂಗಕರ್ತರು, ಶಿಕ್ಷಕರು, ಬರಹಗಾರರು ಹಾಗೂ ವಿದ್ವಾಂಸರಾಘಿ ಗುರುತಿಸಿಕೊಂಡವರು. ಶ್ರೀ ಕಟೀಲು ಕ್ಷೇತ್ರ ಮಹಾತ್ಮೆ, ಸೊರ್ಕುದ ಸಿರಿಗಿಂಡೆ, ಗೋವಾ ದುರಂತ, ಬಿರ್ದ್ ದ ಬೈರವೆರ್ ಮುಂತಾದ ಯಕ್ಷಗಾನ ಪ್ರಸಂಗಗಳನ್ನು ಬರೆದಿದ್ದಾರೆ. ಇವರ ಯಕ್ಷಗಾನ ಛಂದೋಬುಧಿ ಯಕ್ಷಗಾನ ಛಂದಸ್ಸಿಗೆ ರಾಜಮಾರ್ಗದಂತಿರುವ ಗ್ರಂಥ. ಯಕ್ಷ ಪಾಣಿನಿ, ಯಕ್ಷಛಂದೋಭಾರ್ಗವ ಮುಂತಾದ ಬಿರುದಾಂಕಿತರು.

***ಶ್ರೀ ಎಂ.ಆರ್.ರಂಗನಾಥ ರಾವ್ – 2013 : ಸೂತ್ರದ ಗೊಂಬೆಯಾಟ***

ವಿಶ್ವದಾದ್ಯಂತ ಸೂತ್ರದ ಗೊಂಬೆಯಾಟವನ್ನು ಪರಿಚಯಿಸಿದವರು ಇವರು. ತಮ್ಮ ತಾತನಾದ ನರಸಿಂಹರಾಯರಿಂದ ಪ್ರೇರಣೆ ಪಡೆದು ಸೂತ್ರದ ಗೊಂಬೆಯಾಟದ ಕಲೆಯನ್ನು ಉಳಿಸುವಲ್ಲಿ ಶ್ರಮಿಸಿದವರು. ತಮ್ಮ ವೃತ್ತಿಯನ್ನು ತ್ಯಜಿಸಿ ಸಂಪೂರ್ಣವಾಗಿ ಈ ಕಲೆಯಲ್ಲೇ ತೊಡಗಿಸಿಕೊಂಡು “ರಂಗಪುತ್ಥಳಿ” ಎಂಬ ಸಂಸ್ಥೆಯನ್ನು ಹುಟ್ಟುಹಾಕಿದರು.

***ಶ್ರೀ ಜಿ.ಎಸ್.ಭಟ್ಟ – 2014***

ಇವರು ಹಿರಿಯ ಯಕ್ಷಗಾನ ವಿದ್ವಾಂಸರು, ಸಾಹಿತಿಗಳು. ಡಾ. ಶಿವರಾಮ ಕಾರಂತ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಕೆರೆಮನೆ ಶಂಭು ಹೆಗಡೆ– ಸ್ಮೃತಿ ಬಿಂಬ, ಹೀಗೆ ಅನೇಕರ ಜೀವನಚರಿತ್ರೆಗಳನ್ನು, ಜಾನಪದ, ಯಕ್ಷಗಾನಕ್ಕೆ ಸಂಬಂಧಿಸಿದ ಕೃತಿಗಳನ್ನು ರಚಿಸುವುದಲ್ಲದೇ ಅನೇಕ ಕೃತಿಗಳ ಸಂಪಾದಕರಾಗಿಯೂ ಕೆಲಸ ಮಾಡಿದ ಅನುಭವ ಇವರದು. ಸಮಗ್ರ ಯಕ್ಷಗಾನದ ಬಗ್ಗೆ ಯಕ್ಷಗಾನ ಪರಿಶೀಲನ, ಕರಾವಳಿ ಯಕ್ಷಗಾನ, ಯಕ್ಷಗಂಗೆ, ಯಕ್ಷಗಾನ ಬಯಲಾಟ, ಪಡುವಲಪಾಯ ಯಕ್ಷಗಾನ, ಯಕ್ಷಗಾನ ಕಲೆ, ಯಕ್ಷಲೋಕದ ನಕ್ಷತ್ರಗಳು, ಯಕ್ಷಗಾನ ಕಲಾಧರದಂತಹ ಕೃತಿಗಳ ಕರ್ತೃ ಇವರು.

***ಶ್ರೀ ಸಿ.ತಿಮ್ಮಾರೆಡ್ಡಿ – 2015 :***

ಇವರು ಯಕ್ಷಗಾನದ ಒಂದು ಭಾಗವಾದ ಬಯಲಾಟ ಕಲಾವಿದ.

***ಡಾ.ಎಂ.ಪ್ರಭಾಕರ ಜೋಷಿ – 2016 :***

ಇವರು ನಿವೃತ್ತ ಪ್ರಾಧ್ಯಾಪಕರು, ಯಕ್ಷಗಾನ ಸಂಶೋಧಕರು, ತಾಳಮದ್ದಳೆ ಅರ್ಥಧಾರಿಗಳು, ಉತ್ತಮ ವಾಗ್ಮಿಗಳು. ’ಕೃಷ್ಣ ಸಂಧಾನ : ಪ್ರಸಂಗ–ಪ್ರಯೋಗ’ ಎಂಬ ವಿಷಯದಲ್ಲಿ ಸಂಶೋಧನೆ ಮಾಡಿ ಡಾಕ್ಟರೇಟ್ ಪಡೆದವರು. ಯಕ್ಷಗಾನದ ಬಗ್ಗೆ ಸಮರ್ಥವಾಗಿ ಮಾತನಾಡಬಲ್ಲ ಶ್ರೇಷ್ಠ ವಿಮರ್ಶಕರೂ ಹೌದು. ಯಕ್ಷಗಾನ ಪದಕೋಶ, ವಾಗರ್ಥ, ಮುಡಿ, ತಾಳಮದ್ದಳೆಯ ಕುರಿತಾಘಿ ಕೃತಿಗಳನ್ನು ರಚಿಸಿದ್ದಾರೆ.

***ಶ್ರೀ ಬಲಿಪ ನಾರಾಯಣ ಭಾಗವತರು –2017 : ಯಕ್ಷಗಾನ***

ಯಕ್ಷಗಾನದ ಭಾಗವತಿಕೆಯ ’ಬಲಿಪ ಶೈಲಿ’ಯ ನೇತಾರರು. ಇವರು ಯಕ್ಷಗಾನ ಭಾಗವತರಾಗಿ ಮಾತ್ರವಲ್ಲದೇ ಯಕ್ಷಗಾನ ಪ್ರಸಂಗಗಳನ್ನು ಬರೆದು ಕವಿಯಾಗಿಯೂ ಗುರುತಿಸಿಕೊಂಡವರು. ಇವರು ರಚಿಸಿರುವ 21 ಪ್ರಸಂಗಗಳು ಯಕ್ಷಧ್ರುವ ಪಟ್ಲ ಫೌಂಡೇಶನ್ ನಿಂದ ’ಬಲಿಪರ ಜಯಲಕ್ಷ್ಮೀ’ ಎಂಬ ಹೆಸರಿನಲ್ಲಿ ಅಚ್ಚಾಗಿವೆ. ಇನ್ನೂ ಅಚ್ಚಾಗದ ಪ್ರಸಂಗಗಳೂ ಸುಮಾರಿವೆ.

***ಶ್ರೀ ಬಂಗಾರಾಚಾರಿ ಕಬ್ಬಳ್ಳಿ – 2018 :***

ಮೂಡಲಪಾಯ ಯಕ್ಷಗಾನದಲ್ಲಿ ತೊಡಗಿಸಿಕೊಂಡ ಕಲಾವಿದರು.



*ಡಾ.ಎಂ.ಪ್ರಭಾಕರ ಜೋಷಿ*



*ಬಲಿಪ ನಾರಾಯಣ ಭಾಗವತರು*



*ಬಂಗಾರಾಚಾರಿ ಕಬ್ಬಳ್ಳಿ*

***ನಿಮಗಿದು ಗೊತ್ತೇ? – ಖ್ಯಾತ ಹಿರಿಯ ಪ್ರಸಂಗಕರ್ತ ಸಾಹಿತಿಗಳಾದ ಅಮೃತ ಸೋಮೇಶ್ವರರು ಬರೆದ ಯಕ್ಷಗಾನ ಸಂಶೋಧನಾ ಕೃತಿಯ ಹೆಸರು– ಯಕ್ಷಗಾನ ಕೃತಿ ಸಂಪುಟ***

***ಶ್ರೀ ಕೇಶವ ಶೆಟ್ಟಿಗಾರ್ (ಅಂಬಾತನಯ ಮುದ್ರಾಡಿ) – 2019 : ಯಕ್ಷಗಾನ***

ಇವರು ಮಹಾನ್ ವಿದ್ವಾಂಸರು, ಯಕ್ಷಗಾನ ಕವಿ ಮತ್ತು ಅರ್ಥಧಾರಿಗಳು. ಇಡಗುಂಜಿ ಮೇಳದಲ್ಲಿ ಅತಿಥಿ ಕಲಾವಿದರಾಗಿಯೂ ಭಾಗವಹಿಸಿದ್ದಾರೆ. ಮಹಾಸತಿ ಅನಸೂಯಾ, ಭಕ್ತ ಪ್ರಹ್ಲಾದ ಇವು ಪ್ರಕಟಗೊಂಡ ಯಕ್ಷಗಾನ ಪ್ರಸಂಗಗಳು. ಪಾಂಡು ಚರಿತ್ರೆ, ಹನುಮದ್ವಿಲಾಸ, ರಾಜಾ ಚಿತ್ರಕೇತು, ಆನಂಲೇಖಾ, ಚಿತ್ರಲೇಖಾ, ಸತೀ ರೂಪಮತೀ ಮೊದಲಾದ ಯಕ್ಷಗಾನ ಪ್ರಕಟಗೊಂಡಿಲ್ಲ. ಕ್ರಿಸ್ತ ಕಾರುಣ್ಯ ಎಂಬ ಪ್ರಸಂಗವನ್ನೂ ಬರೆದಿದ್ದಾರೆ.

***ಶ್ರೀ ಡಿ.ಎಸ್.ಶ್ರೀಧರ್ – 2020***

ಉಪನ್ಯಾಸಕರಾಗಿದ್ದವರು, ಬರಹಗಾರರು, ತಾಳಮದ್ದಳೆ ಅರ್ಥಧಾರಿಗಳು , ಪ್ರಸಂಗಕರ್ತರು, ಕಲಾ ಸಂಘಟಕರು, ಯಕ್ಷಗಾನ ಲೇಖಕರು, ವಿಮರ್ಶಕರು. 2016 ರ ಅಖಿಲ ಭಾರತ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. 35ಕ್ಕೂ ಮಿಕ್ಕಿ ಯಕ್ಷಗಾನ ಪ್ರಸಂಗಗಳು, ಕಾದಂಬರಿಗಳು, ಸುಮಾರು 500 ಲೇಖನಗಳು ಹಾಗೂ ಇತರೆ ಅನೇಕ ಕೃತಿಗಳನ್ನು ರಚಿಸಿದ್ದಾರೆ.

***ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ಮೈಸೂರು – 2021***


ಯಕ್ಷಗಾನ ಕಲಾವಿದರು, ಪ್ರಸಂಗಕರ್ತರು, ಸಾಹಿತಿಗಳು. ಯಕ್ಷಗಾನ ಛಂದೋಗತಿ, ಯಕ್ಷಗಾನ ಛಂದಸ್ಸು, ಯಕ್ಷಗಾನ ಸಾಹಿತ್ಯ ಚರಿತ್ರೆ , ಯಕ್ಷಗಾನ ಪ್ರಸಂಗ ಸಾಹಿತ್ಯ, ಯಕ್ಷರಸಬಾವಿ, ಕರ್ನಾಟಕ ಯಕ್ಷಗಾನ ಕವಿಚರಿತ್ರೆ, ಯಕ್ಷಗಾನ ಕವಿ ಕಾವ್ಯ ವಿಚಾರ, ಮುಂತಾದ ಅನೇಕ ಯಕ್ಷಗಾನ ಸಂಬಂಧಿ ಕೃತಿಗಳನ್ನು ರಚಿಸಿದ್ದಾರೆ.

***ಶ್ರೀ ಗಣೇಶ ಕೊಲೆಕಾಡಿ – 2022***

ಯಕ್ಷಗಾನ ಛಾಂದಸರು, ಯಕ್ಷಗಾನ ಕವಿ, ಯಕ್ಷಗಾನ ಗುರು, ಹಿಮ್ಮೇಳದ ಅನುಭವಿಗಳು ಇವರು. ಕನ್ನಡ –ತುಳು ಯಕ್ಷಗಾನ ಪ್ರಸಂಗಗಳನ್ನು ಬರೆದಿದ್ದಾರೆ. ಕುಂಜಾರುಗಿರಿ ಕ್ಷೇತ್ರ ಮಹಾತ್ಮೆ, ಕುಂಜಿರಾಯ ಮಹಾತ್ಮೆ, ಸಮರ ಸೌಗಂಧಿಕೆ, ಶಿವಭಕ್ತ ಪುರುಷಾಮೃಗ ಮೊದಲಾದ ಪ್ರಸಂಗಗಳನ್ನು ಬರೆದಿದ್ದಾರೆ. ಅನೇಕ ವಿದ್ಯಾರ್ಥಿಗಳಿಗೆ ಯಕ್ಷಗಾನ ಹಿಮ್ಮೇಳ ಪಾಠವನ್ನೂ, ಯಕ್ಷಗಾನ ಛಂದಸ್ಸಿನ ಪಾಠವನ್ನೂ ಹೇಳಿಕೊಡುವ ಸಹೃದಯಿ ಶಿಕ್ಷಕ.




***ಅಂಬಾತನಯ ಮುದ್ರಾಡಿ***



***ಡಿ.ಎಸ್.ಶ್ರೀಧರ್***




***ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್***



***ಗಣೇಶ ಕೊಲೆಕಾಡಿ***

***ಲೇಖಕರು – ಶ್ರೀಮತಿ ಸಾಯಿಸುಮ ನಾವಡ***

## ದೈವದ ಪಾತ್ರಗಳು ಯಕ್ಷಗಾನಕ್ಕೆ



**ಎಂ.ಶಾಂತರಾಮ ಕುಡ್ವ**

ಯಕ್ಷಗಾನ ಹಾಗೂ ದೈವಾರಾಧನೆ–ಇವೆರಡೂ ಕರಾವಳಿಯ ಸಂಸ್ಕೃತಿ. ಯಕ್ಷಗಾನದಲ್ಲಿ ಭಕ್ತಿಯೊಂದಿಗೆ ಮನೋರಂಜನೆಯೂ ಮುಖ್ಯವಾದರೆ, ದೈವಾರಾಧನೆ ಅಂದರೆ ಅಲ್ಲಿ ಭಕ್ತಿ ಹಾಗೂ ನಂಬಿಕೆಯೇ ಪ್ರಧಾನವೇ ಹೊರತು ಮನೋರಂಜನೆ ಇಲ್ಲ. ಯಕ್ಷಗಾನದ ಮೇಲೆ ದೈವಾರಾಧನೆಯ ಪ್ರಭಾವ ಬೀರಿದೆಯೋ ಅಥವಾ ದೈವಾರಾಧನೆಯ ಮೇಲೆ ಯಕ್ಷಗಾನದ ಪ್ರಭಾವ ಬೀರಿದೆಯೋ ಎಂಬುದರ ಬಗ್ಗೆ ಸಹಮತ ಇಂದಿಗೂ ಇಲ್ಲ. ದೈವಾರಾಧನೆಯಲ್ಲಿ ಸತ್ಯವನ್ನು, ನಂಬಿಕೆಯನ್ನು ಕಾಪಾಡುವ ಹೊಣೆಗಾರಿಕೆ ಇದ್ದರೆ, ಯಕ್ಷಗಾನಕ್ಕೆ ನಮ್ಮ ಪುರಾಣಗಳನ್ನು, ಸನಾತನ ಮೌಲ್ಯಗಳನ್ನು ಪ್ರಸಾರ ಮಾಡುವ ಉದ್ದೇಶವಿದೆ.

ಬಣ್ಣಗಾರಿಕೆ, ವೇಷಭೂಷಣಗಳಲ್ಲಿ ಇವೆರಡರಲ್ಲಿ ಕೆಲವೊಂದು ಸಾಮ್ಯತೆ ಇದ್ದರೂ, ದೈವಾರಾಧನೆ ಅಂದರೆ ಭಕ್ತಿ, ನಂಬಿಕೆಯನ್ನೊಳಗೊಂಡ ಆರಾಧನಾ ಕ್ರಮವಾದರೆ, ಯಕ್ಷಗಾನವು ಭಕ್ತಿಯನ್ನೊಳಗೊಂಡ ಕಲೆ. ದೈವಾರಾಧನೆಯು ಭಕ್ತಿಯ ಆಚರಣೆಯಾದರೆ, ಯಕ್ಷಗಾನ ಭಕ್ತಿಯ ಕಲಾ ಪ್ರದರ್ಶನ. ಆದರೆ, ಇತ್ತೀಚೆಗೆ ಯಕ್ಷಗಾನ ಪ್ರಸಂಗಗಳಲ್ಲಿ ದೈವದ ಪಾತ್ರಗಳು ಬರತೊಡಗಿವೆ. ಇದಕ್ಕೆ ದೀರ್ಘ ಇತಿಹಾಸವೂ ಇದೆ. ಬಹುಶಃ ಶ್ರೀ ದೇವಿ ಮಹಾತ್ಮೆ ಪ್ರಸಂಗವು ಯಕ್ಷಗಾನಕ್ಕೆ ಅಳವಡಿಸಿದ ನಂತರವೇ ಇರಬಹುದೇನೋ? ಶ್ರೀ ದೇವಿ ಮಹಾತ್ಮೆ ಪ್ರಸಂಗದ ಕೊನೆಯಲ್ಲಿ ರಕ್ತಬೀಜಾಸುರನನ್ನು ಕೊಲ್ಲಲು ಶ್ರೀದೇವಿಯು ರಕ್ತೇಶ್ವರಿಯಾಗಿ ಬರುತ್ತಾಳೆ. ರಕ್ತೇಶ್ವರಿಯ ಪಾತ್ರವನ್ನು ನೇಮದಲ್ಲಿ (ದೈವಾರಾಧನೆಯ ಒಂದು ವಿಧಾನ) ಬರುವ ರಕ್ತೇಶ್ವರಿಯ ವೇಷವನ್ನೇ ಯಕ್ಷಗಾನಕ್ಕೆ ತಂದರು. ಯಕ್ಷಗಾನ ಹಾಗೂ ದೈವಾರಾಧನೆ ಇವೆರಡೂ ಗ್ರಾಮೀಣ ಭಾಗದ ಆಚರಣೆಯಾದ ಕಾರಣ, ಇವೆರಡನ್ನೂ ಸಮನ್ವಯಿಸಿದರೆ ಹೆಚ್ಚು ಮಂದಿಯನ್ನು ತಲುಪಲು ಸಾಧ್ಯ ಎಂಬ ಉದ್ದೇಶವೂ ಇದರ ಹಿಂದಿರಬಹುದು. ನಂತರದಲ್ಲಿ ಸ್ಥಳ ಪುರಾಣ, ಕ್ಷೇತ್ರ ಮಹಾತ್ಮೆ, ಪಾಡ್ದನ ಆಧರಿತ ಪ್ರಸಂಗಗಳು, ಕಾಲ್ಪನಿಕ ತುಳು ಪ್ರಸಂಗಗಳು ಯಕ್ಷರಂಗವನ್ನು ಪ್ರವೇಶಿಸಿದವು. ಈ ಕಾಲಘಟ್ಟದಲ್ಲಿ ದೈವದ ಪಾತ್ರಗಳು ಯಕ್ಷಗಾನ ವೇದಿಕೆಯಲ್ಲಿ ವಿಜೃಂಭಿಸಿದವು. ಕೋಟಿ ಚೆನ್ನಯ, ತುಳುನಾಡ ಸಿರಿ, ಕಾಂತಬಾರೆ ಬೂದಬಾರೆ, ಕೋರ್ದಬ್ಬು ಬಾರಗ, ದೇವುಪೂಂಜ ಪ್ರತಾಪ ಮುಂತಾದ ಪಾಡ್ದನ ಆಧರಿತ




ಪ್ರಸಂಗಗಳು ಯಕ್ಷ ರಂಗಕ್ಕೆ ಬಂದಾಗ, ಸಹಜವಾಗಿಯೇ, ದೈವದ ಪಾತ್ರಗಳೂ ಯಕ್ಷಗಾನ ಪ್ರವೇಶಿಸಬೇಕಾಯಿತು. ಆದರೆ, ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಆಗಿನ ಕಾಲದಲ್ಲಿ ದೈವಗಳ ಪಾತ್ರಗಳು ಯಕ್ಷಗಾನದಲ್ಲಿ ಯಕ್ಷಗಾನೀಯ ವೇಷಭೂಷಣದಲ್ಲೇ ಪ್ರಸ್ತುತಗೊಳ್ಳುತ್ತಿತ್ತು. ಹಾಗಾಗಿ ಯಾರದ್ದೇ ಆಕ್ಷೇಪ ಇರಲಿಲ್ಲ. ಆದರೆ, ನಂತರ ಕಾಲ್ಪನಿಕ ತುಳು ಪ್ರಸಂಗಗಳು, ಸ್ಥಳ ಪುರಾಣಗಳು ಯಕ್ಷರಂಗ ಪ್ರವೇಶಿಸಿದ ನಂತರ, ಕೋಲ – ನೇಮಗಳಲ್ಲಿ ಬರುವ ವೇಷಭೂಷಣಗಳೇ ಯಕ್ಷಗಾನದಲ್ಲಿ ಕಾಣಿಸಿಕೊಳ್ಳಲಾರಂಭಿಸಿದವು. ದೈವಾರಾಧನೆಯಲ್ಲಿ ದೈವಗಳು ಕುಣಿಯುವಂತೆ, ಯಕ್ಷಗಾನದಲ್ಲೂ ಕುಣಿಯಲಾರಂಭವಾಯಿತು. ಇತ್ತೀಚೆಗೆ ಇದು ವಿವಾದಕ್ಕೂ ಕಾರಣವಾಗಿದೆ. ದೈವಾರಾಧನೆಯನ್ನು ಅಪಹಾಸ್ಯ ಮಾಡುವಂತೆ ಅಥವಾ ವಿಡಂಬನೆ ಮಾಡುವಂತೆ ಆಗುತ್ತಿದೆ ಎಂಬ ಆಕ್ಷೇಪವೂ ಬರಲಾರಂಭಿಸಿದೆ.

ಕೆಲವೊಂದು ಪ್ರಸಂಗಗಳಲ್ಲಿ ದೈವದ ಪಾತ್ರಗಳು ಬರಲೇಬೇಕಾಗುತ್ತದೆ. ಆದರೆ, ಅವನ್ನು ಯಕ್ಷಗಾನೀಯ ಶೈಲಿಯಲ್ಲೇ ಪ್ರದರ್ಶಿಸಬೇಕು. "ಬಪ್ಪನಾಡು ಕ್ಷೇತ್ರ ಮಹಾತ್ಮೆ" ಪ್ರಸಂಗದಲ್ಲಿ ಬರುವ ಕೋಟಿ ಚೆನ್ನಯ ಹಾಗೂ ಕಾಂತಬಾರೆ – ಬೂದ ಬಾರೆ ಪಾತ್ರಗಳು ಇಂದಿಗೂ ಯಕ್ಷಗಾನೀಯ ಶೈಲಿಯಲ್ಲೇ ಇವೆ. ಇತ್ತೀಚೆಗೆ ಶ್ರೀ ದೇವಿ ಮಹಾತ್ಮೆ ಪ್ರಸಂಗದಲ್ಲಿ ಬರುವ ರಕ್ತೇಶ್ವರಿಯ ಪಾತ್ರವನ್ನೂ ಯಕ್ಷಗಾನೀಯ ಶೈಲಿಯಲ್ಲೇ ಪ್ರಸ್ತುತಿ ನೀಡುತ್ತಿದ್ದಾರೆ. ದೈವಗಳ ಪಾತ್ರಗಳು ಯಕ್ಷರಂಗದಲ್ಲಿ ಯಕ್ಷಗಾನೀಯ ಶೈಲಿಯಲ್ಲೇ ಇರಲಿ. ಆವೇಶಗಳಿಲ್ಲದೇ ನಾಟ್ಯ, ವೇಷಭೂಷಣಗಳು ಯಕ್ಷಗಾನದ್ದೇ ಇದ್ದು, ಪ್ರಸಂಗದ ಕಥಾವಸ್ತುವಿಗೆ ಬೇಕೇ ಆದರೆ, ದೈವದ ಪಾತ್ರಗಳು ಬಂದರೆ ಒಳ್ಳೆಯದು. ಯಕ್ಷಗಾನದಲ್ಲಿ ದೈವದ ಪಾತ್ರವನ್ನು ಚಿತ್ರಿಸುವಾಗ ಜಾನಪದ ವಿದ್ವಾಂಸರಲ್ಲಿ ಚರ್ಚಿಸಿ ಅಥವಾ ಸಂಧಿ, ಪಾಡ್ದನಗಳನ್ನು ಕೇಳಿ ನಿರ್ವಹಿಸಿದರೆ, ಪಾತ್ರಕ್ಕೆ ನ್ಯಾಯ ಒದಗಿಸಿದಂತಾಗುತ್ತದೆ. – ***ಎಂ. ಶಾಂತರಾಮ ಕುಡ್ವ, ಮೂಡುಬಿದಿರೆ***

## ಇದು ಬರೀ ಚಿತ್ರವಲ್ಲ !

***ಮನೋಹರ್ ಕುಂದರ್ ಚಿತ್ರ–ಕಥೆ***




ಯಕ್ಷಗಾನದ ವೈಶಿಷ್ಟ್ಯವೇ ಹಾಗೆ. ಒಮ್ಮೆ ಅದರ ಗೀಳು ಹತ್ತಿದರೆ ಸಾಕು, ಅದರಿಂದ ವಿಮುಖರಾಗಿ ಹೊರಬರುವುದು ಕಷ್ಟಸಾಧ್ಯ. ಈ ಗೀಳಿನಿಂದಲೇ ಅನೇಕರು ಕಲಾವಿದರಾಗಿ, ಪ್ರೇಕ್ಷಕರಾಗಿ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಕಲೋಪಾಸನೆಯನ್ನು ಮಾಡಿದ್ದಾರೆ/ಮಾಡುತ್ತಿದ್ದಾರೆ. ಇದೇ ರೀತಿಯಲ್ಲಿ ಇಲ್ಲೊಬ್ಬರು ತೀರ ವಿಭಿನ್ನವಾದ ಸಾಧನೆಯೊಂದನ್ನು ಮಾಡಿ ಯಕ್ಷಗಾನ ವಲಯದಲ್ಲಿ ಸೈ ಎನಿಸಿಕೊಂಡಿದ್ದಾರೆ. ಸುಮಾರು 40 ವರುಷಗಳಿಂದ ನಾಲ್ಕು ಲಕ್ಷಕ್ಕೂ ಹೆಚ್ಚು ಯಕ್ಷಗಾನ ಸಂಬಂಧಿ ಫೋಟೋಗಳನ್ನು ಸಂಗ್ರಹಿಸಿ ಯಕ್ಷಗಾನ ಕ್ಷೇತ್ರಕ್ಕೆ ವಿಶಿಷ್ಟ ದಾಖಲೆಯನ್ನು ಒದಗಿಸಿದ್ದಾರೆ. ಇಂತಹ ಅಪೂರ್ವ ಸಾಧನೆಯನ್ನು ಮಾಡಿದವರು ಉಡುಪಿ ಜಿಲ್ಲೆಯ ಬಡಾ ಎರ್ಮಾಳಿನ ಮನೋಹರ್ ಕುಂದರ್.

ಮನೋಹರ್ ಕುಂದರ್ ಅವರಿಗೆ ಬಾಲ್ಯದಿಂದಲೂ ಯಕ್ಷಗಾನವೆಂದರೆ ಎಲ್ಲಿಲ್ಲದ ಆಸಕ್ತಿ. ಇದರಲ್ಲಿ ತಾನು ಬಣ್ಣ ಹಚ್ಚಿ ಕಲಾವಿದನೆನಿಸಿಕೊಳ್ಳುವ ಆಸೆಯನ್ನು ಹೊಂದಿ ಒಂದೆರಡು ವೇಷಕ್ಕೆ ಕಾರಣಾಂತರದಿಂದ ನಿಲ್ಲಿಸಿದ್ದರು. ಆದರೆ ಕಲೆಯ ಬಗೆಗಿನ ಸೆಳೆತ ಅವರನ್ನು ಬಿಡಲಿಲ್ಲ. ಯಕ್ಷಗಾನದಲ್ಲಿ ತಾನು ಏನಾದರೂ ಸಾಧಿಸಬೇಕು ಎಂಬ ಕನಸನ್ನು ಹೊಂದಿ ಆ ದಿಸೆಯಲ್ಲಿ ಮುಂದುವರೆದರು. ಯಕ್ಷಗಾನದ ಪಾತ್ರ ವೈವಿಧ್ಯತೆ, ವೇಷಗಾರಿಕೆ, ಮುಖವರ್ಣಿಕೆ, ನೃತ್ಯ/ನೃತ್ತ ಭಂಗಿ ಇತ್ಯಾದಿ ವಿಚಾರಗಳನ್ನು ಛಾಯಾಗ್ರಹಣದ ಮೂಲಕ ದಾಖಲಿಸುವ ವಿನೂತನ ಪ್ರಯತ್ನವನ್ನು ಮಾಡಿದರು. ಆದರೆ ಅವರ ಪ್ರಯತ್ನ ಅಷ್ಟು ಸರಳವಾಗಿರಲಿಲ್ಲ. ವೃತ್ತಿಪರ ಛಾಯಾಗ್ರಾಹಕರ ಮೂಲಕ ಚಿತ್ರಗಳನ್ನು ತೆಗೆಸಿದರೂ ಅದು ತಮ್ಮ ನಿರೀಕ್ಷೆಯಂತೆ ಬಾರದೆ ಹಣ ವ್ಯರ್ಥವಾಗಿತ್ತು. ಆದರೂ ಪ್ರಯತ್ನವನ್ನು ಬಿಡದೇ ಸ್ವತಃ ಅವರೇ ಕ್ಯಾಮರಾವೊಂದನ್ನು ಖರಿದೀಸಿ, ಅದರ ಪ್ರಯೋಗವನ್ನು ಬಲ್ಲವರ ಮೂಲಕ ಕಲಿತು, ಅದರಲ್ಲಿ ತಮ್ಮ ಇಚ್ಛೆಯ ಫೋಟೋಗಳನ್ನು ತೆಗೆಯುತ್ತ ಸಾಗಿದರು. ಇಂದಿಗೆ ಅವರ ಸಂಗ್ರಹದಲ್ಲಿ ಪ್ರಿಂಟ್ ಆಗಿರುವ ನಾಲ್ಕು ಲಕ್ಷ ಫೋಟೋಗಳು ಇವೆ!

7–8 ಶತಮಾನಗಳ ಇತಿಹಾಸವಿರುವ ಯಕ್ಷಗಾನದಲ್ಲಿ ಕಳೆದ ಒಂದು ಶತಮಾನದಲ್ಲಿ ದೊಡ್ಡ ಮಟ್ಟದ ಸ್ಥಿತ್ಯಂತರವನ್ನು ಕಂಡಿರುವುದನ್ನು ವಿದ್ವಾಂಸರು ಗುರುತಿಸುತ್ತಾರೆ. ಹಾಗಾಗಿಯೇ ಯಕ್ಷಗಾನದಲ್ಲೀನ ಈ ಸ್ಥಿತ್ಯಂತರ ದೊಡ್ಡ ಸಂಶೋಧನೆಯ ವಿಷಯವಾಗಿದೆ. ಈ ನಿಟ್ಟಿನಲ್ಲಿ ಕುಂದರ್ ಅವರ ಸಂಗ್ರಹದ ಯಕ್ಷಚಿತ್ರಗಳು ದೊಡ್ಡ ಮಟ್ಟದಲ್ಲಿ ಸಂಶೋಧನೆಗೆ ದಾಖಲೆಯನ್ನು ಒದಗಿಸುತ್ತವೆ. ಅವರ ಛಾಯಾಕೃತಿಗಳಲ್ಲಿ ಕಲಾತ್ಮಕತೆಗಿಂತ ಹೆಚ್ಚು ಯಕ್ಷಗಾನದ ಸೂಕ್ಷ್ಮ ವಿಷಯಗಳನ್ನು ದಾಖಲಿಸುವ ಪ್ರಯತ್ನವನ್ನು ಮಾಡಿರುವುದು ಇದಕ್ಕೆ ಪೂರಕವೆನಿಸುತ್ತವೆ. ಪಾತ್ರಗಳ ನಿಲುವು, ಹಸ್ತಾಭಿನಯ, ಮುಖವರ್ಣಿಕೆ, ಅದರ ಹುಬ್ಬು, ನಾಮಗಳು, ಮುದ್ರೆಗಳು, ಆಹಾರ್ಯದ ಪದ್ಧತಿಗಳು, ಮೀಸೆ, ಗಡ್ಡ ಇತ್ಯಾದಿಗಳು ಯಕ್ಷಗಾನ ಪರಂಪರೆಯ ಕ್ರಮಗಳ ಬಗ್ಗೆ ಸವಿಸ್ತಾರವಾದ ಮಾಹಿತಿಯನ್ನು ಒದಗಿಸುತ್ತವೆ. ಇದು ಹಿಂದಿನ ಹಾಗೂ ಇಂದಿನ ವೇಷಗಾರಿಕೆ ಕ್ರಮಗಳ ವ್ಯತ್ಯಾಸವನ್ನು ತಿಳಿಸಿಕೊಡುತ್ತದೆ.


ಯಕ್ಷಗಾನದಲ್ಲಿ ಹಲವು ಮಟ್ಟು, ತಿಟ್ಟುಗಳಿವೆ. ಪ್ರತಿಯೊಂದರಲ್ಲೂ ಬೇರೆಯಾದ ಆಹಾರ್ಯ ಪದ್ಧತಿಗಳು, ನೂರಾರು ಪಾತ್ರ ವೈವಿಧ್ಯತೆಗಳು, ಹಲವು ಬಗೆಯ ವೇಷ ಕ್ರಮಗಳು ಇತ್ಯಾದಿಗಳು ಇವೆ. ಕುಂದರ್ ಮಾತ್ರ ಒಂದು ವಿಷಯಕ್ಕೆ ಮಾತ್ರ ತಮ್ಮನ್ನು ಸಿಮೀತವಾಗಿಸಿಕೊಳ್ಳದೇ ಸಮಗ್ರವಾದ ಯಕ್ಷಗಾನವನ್ನು ಛಾಯಾಚಿತ್ರಗಳ ಮೂಲಕ ದಾಖಲಿಸುವ ಪ್ರಯತ್ನವನ್ನು ಮಾಡಿದ್ದಾರೆ. ಸ್ವತಃ ತಾಳಮದ್ದಲೆಯ ಅರ್ಥಧಾರಿಗಳು, ಪ್ರವಚನಕಾರರು ಆಗಿರುವ ಕುಂದರ್ ಅವರು ಇಲ್ಲಿ ಚಿತ್ರಗಳನ್ನು ಮಾತ್ರ ತೆಗೆಯದೇ ಅದರ ಅಂತಃಸತ್ವವನ್ನು, ಸೂಕ್ಷ್ಮವನ್ನು ಅರಿಯುವ ಪ್ರಯತ್ನವನ್ನು ಮಾಡಿದ್ದಾರೆ. ಹಾಗಾಗಿಯೇ ಅವರ ಪ್ರತಿಯೊಂದು ಚಿತ್ರದ ಬಗ್ಗೆಯೂ ಸಮಗ್ರವಾದ ಮಾಹಿತಿಯನ್ನು ಒದಗಿಸುತ್ತಾರೆ. ಆ ಚಿತ್ರದ ವೈಶಿಷ್ಟ್ಯ ಏನು, ಪಾತ್ರಧಾರಿ/ಗಳು ಯಾರು? ಸಂದರ್ಭ ಯಾವುದು ಇತ್ಯಾದಿಗಳ ಬಗ್ಗೆ ವಿವರಿಸಬಲ್ಲರು. ಯಕ್ಷಗಾನದ ಯಾವುದೇ ಕಮ್ಮಟವಿರಲಿ, ಕಾರ್ಯಗಾರವಿರಲಿ ಅಲ್ಲಿಗೆ ಹೋಗಿ ಅಲ್ಲಿನ ವಿಚಾರಗಳನ್ನು ಟಿಪ್ಪಣಿ/ಟೇಪ್



ರವಿ ಮಡೋಡಿ

ರೆಕಾರ್ಡ್ ಗಳಲ್ಲಿ ದಾಖಲಿಸುತ್ತಾರೆ. ಹಾಗಾಗಿಯೇ ಅವರ ಸಂಗ್ರಹದಲ್ಲಿ ಚಿತ್ರಗಳ ಜೊತೆಗೆ ನೂರಾರು ಟಿಪ್ಪಣಿಯನ್ನು ಮಾಡಿಕೊಂಡ ಪುಸ್ತಕಗಳು ಹಾಗೂ ಧ್ವನಿ ಮುದ್ರಿಕೆಗಳು ಇವೆ. ಜೊತೆಗೆ ಹಳೆಯ ಯಕ್ಷಗಾನದ ಫೋಟೋಗಳನ್ನು(1886ರ ಯಕ್ಷಗಾನದ ಫೋಟೋ ಇದೆ), ಪುಸ್ತಕಗಳನ್ನು ಸಂಗ್ರಹಿಸಿ ಇಟ್ಟುಕೊಂಡಿದ್ದಾರೆ. ಬಹುಶಃ ಅವರ ಎಲ್ಲಾ ಸಂಗ್ರಹವನ್ನು ಅಧ್ಯಯನ ಮಾಡಿದರೆ ಯಕ್ಷಗಾನಕ್ಕೆ ಒಂದಷ್ಟು ಹೊಸ ವಿಚಾರಗಳು ಸಿಗಬಹುದು!

ಕುಂದರ್ ಅವರ ಛಾಯಚಿತ್ರಗಳ ಬಗ್ಗೆ ಮಾತನ್ನು ಆಡುವಾಗ ಅಂದಿನ ಕ್ಯಾಮರಾ ತಾಂತ್ರಿಕತೆ ಹಾಗೂ ಅದರ ಸಮಸ್ಯೆಗಳ ಬಗ್ಗೆ ಹೇಳದಿದ್ದರೆ ಅಪೂರ್ಣವೆನಿಸುತ್ತದೆ. ಈಗಿನ ಕ್ಯಾಮರಾ ವ್ಯವಸ್ಥೆಗಳ ಹಾಗೆ 40 ವರುಷಗಳ ಹಿಂದೆ ಆ ಕ್ಷಣದಲ್ಲಿ ಫೋಟೋಗಳನ್ನು ಅಳಿಸಿ ಹಾಕುವ ಅಥವಾ ತಿದ್ದುವ ಅವಕಾಶವಿರಲಿಲ್ಲ. ಅಂದಿನ ರೀಲ್ ಕ್ಯಾಮರಾಗಳಲ್ಲಿ ತೆಗೆದ ಫೋಟೋಗಳು ಸರಿಯಾಗಿ ಬಂದಿದೆಯೇ ಎಂದು ತಿಳಿಯುತ್ತಿದ್ದದ್ದು ಫೋಟೋವನ್ನು ಪ್ರಿಂಟ್ ತೆಗೆದ ಬಳಿಕವಷ್ಟೇ. ಜೊತೆಗೆ ಯಕ್ಷಗಾನ ರಂಗಸ್ಥಳದ ಫೋಟೋಗಳನ್ನು ರೀಲ್ ಕ್ಯಾಮರದಲ್ಲಿ ತೆಗೆಯುವುದು ಸುಲಭವಿರಲಿಲ್ಲ. ರಂಗಸ್ಥಳದಲ್ಲಿ ಬೆಳಕಿನ ವ್ಯವಸ್ಥೆಯಾಗಲಿ, ಹಿಂದಿನ ಪರದೆಯಾಗಲಿ ಸರಿಯಾಗಿರಲಿಲ್ಲ. ಮೈಕ್ ಗಳು ಅಡ್ಡವಿರುತ್ತಿದ್ದವು. ರಂಗದಲ್ಲಿನ ನೃತ್ತ ಭಂಗಿಗಳು, ಪಾತ್ರದ ಆಂಗಿಕ ಕ್ರಿಯೆಗಳು ನಡೆಯುತ್ತಿರುವಾಗಲೇ ಸೆರೆಹಿಡಿಯುವುದು ಕ್ಯಾಮರಾಗಳಲ್ಲಿ ಸವಾಲಿನ ಕಾರ್ಯವಾಗಿದ್ದವು. ಇಂತಹ ಅನೇಕ ಸವಾಲುಗಳನ್ನು ಎದುರಿಸಿ ಮನೋಹರ್ ಕುಂದರ್ ಅವರು ಚಿತ್ರಗಳನ್ನು ತೆಗೆದಿದ್ದಾರೆ. ಅವರ ಚಿತ್ರ ಸಂಗ್ರಹದಲ್ಲಿನ ಶೇಕಡಾ 80 ಭಾಗ ರೀಲ್ ಕ್ಯಾಮರಾ ಚಿತ್ರಗಳು ಎನ್ನುವುದು ವಿಶೇಷವಾಗಿದೆ.




ಮನೋಹರ್ ಕುಂದರ್ ಅವರು ಆರ್ಥಿಕವಾಗಿ ಉತ್ತಮ ಸ್ಥಿತಿಯನ್ನು ಹೊಂದಿದವರಲ್ಲ. ಆದರೆ ಈ ಆಸಕ್ತಿಗೆ ಅವರು ವ್ಯಯಿಸಿದ ಹಣವನ್ನು ನೋಡಿದರೆ ನಿಜಕ್ಕೂ ಅಚ್ಚರಿ ಉಂಟು ಮಾಡುತ್ತದೆ. 80–90 ದಶಕದ ಫೋಟೋಗ್ರಫಿಯ ಸಣ್ಣ ಲೆಕ್ಕಚಾರವನ್ನು ಗಮನಿಸೋಣ. ಒಂದು ಪ್ರದರ್ಶನದ ಫೋಟೋಗಳನ್ನು ತೆಗೆಯುವುದಕ್ಕೆ ಕನಿಷ್ಠ 10 ರೋಲ್ ಗಳು ಬೇಕಾಗಿದ್ದವು. ಅದಕ್ಕೆ 1000 ರೂ ಖರ್ಚಾಗುತ್ತಿತ್ತು. ಇನ್ನು ಸಂಸ್ಕರಿಸುವುದಕ್ಕೆ ಮತ್ತು ಫೋಟೊಗಳನ್ನು ಪ್ರಿಂಟ್ ಗಳನ್ನು ತೆಗೆಯುವುದಕ್ಕೆ ಮತ್ತೆ 1500ರೂ ಗಳು ಖರ್ಚಾಗುತ್ತಿದ್ದವು. ಒಟ್ಟು ಸುಮಾರು 2500 ಮೊತ್ತ ವ್ಯಯವಾಗುತ್ತಿತ್ತು(ಅಂದಾಜು 200 ಫೋಟೋಗಳಿಗೆ). ಈಗ ಅವರ ಸಂಗ್ರಹದಲ್ಲಿ 4 ಲಕ್ಷ ಫೋಟೋಗಳಿವೆ. ಅಂದರೆ ಅದಕ್ಕಾಗಿ ಅವರು ಆ ಕಾಲದಲ್ಲಿ ವ್ಯಯಿಸಿದ ಹಣ ಎಷ್ಟಿರಬಹುದು?! ಆರ್ಥಿಕವಾಗಿ ಹಿಂಜರಿಕೆಯಿದ್ದರೂ ಎಲ್ಲಿಯೂ ಯಾರಿಂದಲೂ ಇದಕ್ಕೆ ಹಣವನ್ನು ಪಡೆಯಲಿಲ್ಲ. ಜೀವನ ನಿರ್ವಹಣೆಯ ಜೊತೆಗೆ ಕೌಟುಂಬಿಕ ಸಮಸ್ಯೆಗಳ ಮಧ್ಯೆದಲ್ಲಿ 20 ವರುಷಗಳ ಅಸೌಖ್ಯದಿಂದ ಮಲಗಿದ್ದ ತಾಯಿಯನ್ನು ನೋಡಿಕೊಳ್ಳುವ ಹೊಣೆಗಾರಿಕೆಯನ್ನು ಹೊಂದಿ, ಕೇವಲ ಯಕ್ಷಗಾನದ ಆಸಕ್ತಿ ಹಾಗೂ ಪ್ರೀತಿಯ ಕಾರಣಕ್ಕೆ ಈ ಕಾರ್ಯವನ್ನು ಮಾಡಿರುವುದು ಅತ್ಯಂತ ಶ್ಲಾಘನೀಯವಾಗಿದೆ.

ಕುಂದರ್ ಅವರ ಸಂಗ್ರಹ ಮತ್ತು ತತ್ಪರತೆ ಕೇವಲ ಯಕ್ಷಗಾನಕ್ಕೆ ಮಾತ್ರ ಸಿಮೀತವಾಗಿಲ್ಲ. ಇಡೀ ಕರಾವಳಿಯ ಜನಪದ ಸೊಗಡು ಅವರ ಕ್ಯಾಮರಾ ಕಣ್ಣಿನಲ್ಲಿ ಸೆರೆಯಾಗಿದೆ. ಭೂತಾರಾಧನೆ, ಜನಪದ ಆಚರಣೆಗಳು, ಉತ್ಸವ, ಕರಾವಳಿಯ ಧಾರ್ಮಿಕ ಆಚರಣೆಗಳು, ನಾಗಾರಾಧನೆ,ಬ್ರಹ್ಮಮಂಡಲ, ನಾಗಮಂಡಲ, ಡಕ್ಕೆ ಬಲಿ, ಬುಡಕಟ್ಟು ಜನರ ಜೀವನ ಕ್ರಮ ಇತ್ಯಾದಿ ಕರಾವಳಿಯ ಜನಪದ ಬದುಕನ್ನು ಅವರು ದಾಖಲಿಸಿದ್ದಾರೆ. ಫೋಟೋಗಳಿಗಾಗಿ ಅಲೆಯದ ಸ್ಥಳಗಳಿಲ್ಲ. ಕಾಸರಗೋಡಿನಿಂದ ಕಾರವಾರದವರೆಗೆ ತಿರುಗಾಟವನ್ನು ನಡೆಸಿ ಬಹಳ ಶ್ರಮವಹಿಸಿ ಈ ಕಾರ್ಯವನ್ನು ಮಾಡಿದ್ದಾರೆ. ಮಳೆಗಾಲದಲ್ಲಿ ಕರಾವಳಿಯಲ್ಲಿ ತೀವ್ರವಾದ ಮಳೆ ಬೀಳುವುದರಿಂದ ಪ್ರಿಂಟ್ ತೆಗದ ಫೋಟೋಗಳನ್ನು ಸಂರಕ್ಷಿಸಿ ಇಡುವುದು ಅತ್ಯಂತ ಸವಾಲಿನ ಕೆಲಸ. ಹಲವು ವರುಷಗಳಿಂದ ಜತನದಿಂದ ಫೋಟೋಗಳು ಹಾಳಾಗದಂತೆ ಕಾಪಿಟ್ಟುಕೊಂಡು ಬರುತ್ತಿದ್ದಾರೆ.

ಮುಂದಿನ ತಲೆಮಾರಿಗೆ ಅದರ ಸೊಗಡನ್ನು ತೋರಿಸುವ ಪ್ರಯತ್ನವಾಗಿ 365 ಛಾಯಚಿತ್ರಗಳ 'ಚಿತ್ರಗಳ ಮೂಲಕ ಸಮಕಾಲೀನ ಯಕ್ಷಗಾನ' ಎಂಬ ಚಿತ್ರಸಂಪುಟವನ್ನು 1998ರಲ್ಲಿ ಹೊರತಂದರು. ಮತ್ತೇ 2013ರಲ್ಲಿ 'ಯಕ್ಷಗಾನ ರಂಗವೈಭವ' ಎಂಬ ಕನ್ನಡ/ಇಂಗ್ಲೀಷ್ ಭಾಷೆಯಲ್ಲಿ ಮತ್ತೊಂದು ಹೊತ್ತಿಗೆಯನ್ನು ಹೊರತಂದಿದ್ದಾರೆ. ಜೊತೆಗೆ ಹಲವು ಕಡೆಗಳಲ್ಲಿ ಅವರು 'ಯಕ್ಷ ಫೋಟೋ ಪ್ರದರ್ಶನ'ಗಳನ್ನು ಮಾಡಿದ್ದಾರೆ. ಯಕ್ಷಗಾನದ ಅನೇಕ ಪುಸ್ತಕಗಳಲ್ಲಿ, ಕಮ್ಮಟ, ಕಾರ್ಯಾಗಾರದಲ್ಲಿ ಇವರ ಫೋಟೋಗಳು ಸಂಪನ್ಮೂಲವಾಗಿ ಬಳಕೆಯಾಗಿವೆ. ಮಂಗಳೂರು ವಿಶ್ವವಿದ್ಯಾಲಯ ತನ್ನ ಯಕ್ಷಗಾನ ಮ್ಯೂಸಿಯಂಗಾಗಿ ಇವರ ಛಾಯಚಿತ್ರಗಳನ್ನು ಬಳಸಿಕೊಂಡಿದೆ.

ಒಂದು ವಿಶ್ವವಿದ್ಯಾಲಯ ಅಥವಾ ಸರ್ಕಾರ ಮಾಡಬಹುದಾಗಿರುವ ಕಾರ್ಯವನ್ನು ಕುಂದರ್ ಅವರು ಕೇವಲ ತಮ್ಮ ಆಸಕ್ತಿಯಿಂದ ಸಾಧ್ಯವಾಗಿಸಿಕೊಂಡಿದ್ದಾರೆ. ಆರ್ಥಿಕವಾಗಿ ಬಹಳ ಸೋತರೂ ಅವರು ಮಾತ್ರ ಈ ಪ್ರಯತ್ನದಲ್ಲಿ ಸೋಲದೆ ಯಶಸ್ಸನ್ನು ಕಂಡಿದ್ದಾರೆ. ಒಂದರ್ಥದಲ್ಲಿ ಅವರ ಚಿತ್ರಗಳು ಕೇವಲ ಚಿತ್ರವಾಗಿರದೆ ಪರಂಪರೆಯನ್ನು ಸಾರುವ ಅಮೂಲ್ಯ ದೃಶ್ಯಕಾವ್ಯವಾಗಿವೆ. ಅವರ ಈ ಸಂಗ್ರಹಗಳು ಯಕ್ಷಗಾನ ಸಂಶೋಧನೆಗೆ ಬಳಕೆಯಾದರೆ ಅವರ ಈ ಪ್ರಯತ್ನ ಇನ್ನಷ್ಟು ಸಾರ್ಥಕವೆಸುತ್ತದೆ. ಈ ನಿಟ್ಟಿನಲ್ಲಿ ಸಂಘ–ಸಂಸ್ಥೆಗಳು/ಸರ್ಕಾರಗಳು ಅವರ ಈ ಪ್ರಯತ್ನವನ್ನು ಪ್ರೋತ್ಸಾಹಿಸಿ, ಬೆಂಬಲಿಸಿ ಅಮೂಲ್ಯ ಸಂಪನ್ಮೂಲವನ್ನು ಬಳಸಿಕೊಳ್ಳಬೇಕಿದೆ. – ***ರವಿ ಮಡೋಡಿ, ಬೆಂಗಳೂರು***

**ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ– 9449686807 ನಮ್ಮ ವೆಬ್ ಸೈಟ್ ವಿಳಾಸ– https://nyt.1ngo.in/ – ಸಂಪಾದಕರು**

## ಯಕ್ಷಗಾನ ಪ್ರಸಂಗ ಸಾಹಿತ್ಯ ಮತ್ತು ಪ್ರಕ್ಷಿಪ್ತ ಪ್ರಸಂಗಗಳು



ಪ್ರೋ.ಎಸ್.ವಿ.ಉದಯ ಕುಮಾರ ಶೆಟ್ಟಿ

### *ಪ್ರಸಂಗ ಸಾಹಿತ್ಯ*

'ಪ್ರಸಂಗ' ವೆಂದರೆ ಪದ್ಯಗಳ ಮೂಲಕ ಹೆಣೆಯಲ್ಪಡುವ ಕಥಾ ಸನ್ನಿವೇಷ. ಇದು ಪ್ರದರ್ಶನದ ಪಠ್ಯವೂ ಹೌದು. ಕಥೆಯ ನಡೆಗೆ ಇದುವೇ ಆಧಾರ. ಕಥೆಯನ್ನು ಆರಿಸಿಕೊಳ್ಳುವಾಗ ಕವಿಯ ಹೊಣೆಗಾರಿಕೆ ಮಹತ್ವದ್ದು.ಅದು ಕೇವಲ ರಂಜನೆಯಾಗಿರದೆ ಸತ್ವಭರಿತವಾಗಿರಬೇಕು. ಪುರಾಣ ಕಥೆಗಳಲ್ಲಿ ಸಾರ್ವಕಾಲಿಕ ಮೌಲ್ಯವುಳ್ಳವುಗಳಾದರೆ ಸಮಕಾಲೀನ ಸಮಾಜಕ್ಕೆ ಉಪಯುಕ್ತವಾಗಿರುವಂತಾದರೆ ಅದನ್ನು ಹಾಗೆ ಮುಂದಿಡಬಹುದು. ಹಳೆಯ ಕೆಲವು ಸವಕಲು ಅರ್ಥಶೂನ್ಯ ವಿಚಾರಗಳನ್ನು ಇಂದು ಮೌಲ್ಯಗಳೆಂದು ಕರೆಯುವಂತಿಲ್ಲ. ಇಂತಹ ಸಂದರ್ಭದಲ್ಲಿ ಇಂದಿನ ದೃಷ್ಟಿ ಧೋರಣೆಗಳಿಗೆ ಸರಿಯಾಗಿ ಪುರಾಣ ಘಟನೆಗಳನ್ನು ಪುನರ್ ರಚಿಸಬೇಕಾಗುತ್ತದೆ.

ಯಕ್ಷಗಾನ ಕೃತಿಗಳು ಬಹು ಮಟ್ಟಿಗೆ ಸಂವಾದದಿಂದಲೇ ಕೂಡಿದೆ. ಸಂವಾದವನ್ನು ಹೊಸೆಯುವಾಗ ಭಿನ್ನ ಭಿನ್ನ ಛಂದಸ್ಸುಗಳಲ್ಲಿ ಆಯಾಯ ಪಾತ್ರಗಳ ಸ್ವಭಾವಕ್ಕನುಗುಣವಾದ ಶೈಲಿ, ಶಬ್ದಗಳನ್ನು ಉಪಯೋಗಿಸಬೇಕು. ಒಂದೇ ತಾಳದಲ್ಲಿ ಹೆಣೆಯಲಾದ ಸುದೀರ್ಘ ಸಂಭಾಷಣೆ ಏಕತಾನತೆಯನ್ನು ಉಂಟು ಮಾಡುತ್ತವೆ. "ದ್ರೌಪದೀ ಪ್ರತಾಪ"ದಲ್ಲಿ ಹೆಚ್ಚಿನ ಪದ್ಯಗಳು ಝಂಪೆ ತಾಳದಲ್ಲಿ ಇರುವುದನ್ನು ಗಮನಿಸಬಹುದು. ವೀರರಸಕ್ಕೆ ಬಳಸುವ ರಾಗ ತಾಳಗಳನ್ನು ಯುದ್ಧ ಸನ್ನಿವೇಷಕ್ಕೆ ಮತ್ತು ಪುಂಡು ವೇಷಗಳಿಗೆ ಬಳಸಬೇಕೆ ವಿನಹ ಕರುಣ ರಸದ ನೀಲಾಂಬರಿ, ಆನಂದ ಭೈರವಿ ರಾಗದ ಕೋರೆ ತಾಳದ ಪದ್ಯಗಳನ್ನು ಬಳಸಬಾರದು. ಎಲ್ಲಾ ಸಂದರ್ಭದಲ್ಲೂ ತಾಳದ ಸಾಹಿತ್ಯವನ್ನೇ ಬಳಸಿದರೆ ಭಾಗವತನಿಗೆ ತೋರಿಸಿಕೊಳ್ಳಲು ಅಸಾಧ್ಯ. ಹಾಗಾಗಿ ಭಾಮಿನಿ, ವಾರ್ಧಿಕ್ಯ, ಕಂದ ಪದ್ಯಗಳನ್ನುಅಲ್ಲಲ್ಲಿ ತುರುಕಿಸುವುದು ರೂಢಿ. ಇವು ಕೆಲವೊಮ್ಮೆ ಕವಿವಾಣಿಯೂ ಆಗಿರುತ್ತವೆ. ಈ ಪದ್ಯಗಳನ್ನು ಭಾಗವತನು ಪಕ್ಕ ವಾದ್ಯವಿಲ್ಲದೆ ಭಾವಕ್ಕನುಗುಣವಾಗಿ ತನಗನುಕೂಲವಾದ ರಾಗದಲ್ಲಿ ಹಾಡಬಹುದು. ಇಲ್ಲಿ ಸನ್ನಿವೇಶದ ತೀವ್ರತೆಯನ್ನು ಪ್ರೇಕ್ಷಕ ಅನುಭವಿಸಬಹುದು. ಹೆಚ್ಚಿನ ಪ್ರಸಂಗಕರ್ತರು ರಾಮಾಯಣ, ಭಾರತದಲ್ಲಿನ ಪದ್ಯಗಳನ್ನು ಯಥಾವತ್ತಾಗಿ ಯಕ್ಷಗಾನಕ್ಕೆ ತಂದಿದ್ದಾರೆ. ಇದು ರಚನೆಗೆ ಕೊಟ್ಟ ಗೌರವ ವಿನಹ ಕೃತಿ ಚೌರ್ಯವಲ್ಲ. ಉದಾ; ಕರ್ಣಾರ್ಜುನ ಕಾಳಗದ "ಮಾತೆಗಿತ್ತೆನು ಭಾಷೆಯನು" ಪದ್ಯ. ಇತ್ಯಾದಿ. ಕರ್ಣನ ಹುಟ್ಟು ತಿಳಿಯದಿರುವ ಪಾತ್ರಗಳು ಸಹ ಪದ್ಯದಲ್ಲಿ "ಎಲೆ ಭಾನುಜಾತ" ಎಂದೇ ಸಂಬೋಧಿಸುತ್ತವೆ. ಇದನ್ನು ಕವಿವಾಣಿಯೆಂದೆ ಪರಿಗಣಿಸಬೇಕಾಗುತ್ತದೆ. ಕರ್ಣನ ಹುಟ್ಟು ತಿಳಿಯದ ಶಲ್ಯ ಕರ್ಣನನ್ನು ಹಾಗೆ ಕರೆಯುವುದು ಕರ್ಣಾರ್ಜುನ ಕಾಳಗದಲ್ಲಿ ಗಮನಿಸಬಹುದು. ಕೃಷ್ಣ ಸಂಧಾನದಲ್ಲಿ ಕವಿ ಕೌರವನನ್ನು "ಕಾಮುಕ ಕುರು ಭೂಕಾಂತನ" ಎಂದು ಛಲದಂಕ ಚಕ್ರೇಶ್ವರನನ್ನು ಕರೆದದ್ದು ಎಷ್ಟು ಸಮಂಜಸವೋ .ಯೋಚಿಸಬೇಕಾಗುತ್ತದೆ. ಹಾಗೆಯೆ ರಂಗದಲ್ಲಿ ನಡೆಯುವ ಘಟನೆಯ ಸಂಭಾಷಣೆಯಲ್ಲಿ ಭವಿಷ್ಯದಲ್ಲಿ ನಡೆಯುವ ಘಟನೆಗಳ ಉದಾಹರಣೆ ಹಾಗು ಪದ್ಯಗಳು ಬರಬಾರದು. ರಾಮಾಯಣ ಪ್ರಸಂಗಗಳಲ್ಲಿ ಮಹಾಭಾರತದ ಉದಾಹರಣೆ ಬರುವ ಪದ್ಯಗಳು ಬರಬಾರದು.

ಪಾರ್ತಿಸುಬ್ಬನು ಯಕ್ಷಗಾನಕ್ಕೆ ಹಲವು ಪ್ರಸಂಗ ನೀಡಿದ ಕವಿ.ಅದೆ ಕಾಲದ ದೇವಿದಾಸರು 'ಕೃಷ್ಣ ಸಂಧಾನ', 'ಭೀಷ್ಮಪರ್ವ" ದೇವಿ ಮಹಾತ್ಮೆ "ಗಿರಿಜಾ ಕಲ್ಯಾಣ'ದಂತಹ ಉತ್ತಮ ಪ್ರಸಂಗ ರಚಿಸಿದ್ದಾರೆ. ಈತನ ಭಾರತ ಪ್ರಸಂಗಕ್ಕೆಲ್ಲ ಕುಮಾರವ್ಯಾಸ ಭಾರತವೇ ಆಧಾರ. ಈತನ ರಚನೆಯಲ್ಲಿ ಕೃಷ್ಣ ಸಂಧಾನ ಪ್ರಸಿದ್ದವಾಗಿದ್ದು, ತಾಳಮದ್ದಳೆಯಲ್ಲಿ ಹೆಚ್ಚಾಗಿ ಬಳಕೆಯಲ್ಲಿದೆ. ಕೃಷ್ಣನ ರಾಜತಾಂತ್ರಿಕ ವ್ಯವಸ್ಥೆ ಹೆಚ್ಚು ಬಣ್ಣಿಸಲಾದರೂ ದೃಶ್ಯ ಸಂಯೋಜನೆಯಿಲ್ಲದೆ ರಂಗದಲ್ಲಿ ಈ ಪ್ರಸಂಗ ಹೆಚ್ಚು ಪ್ರಸಿದ್ದವಾಗಿಲ್ಲ. ಅಲ್ಲದೆ ಕೃಷ್ಣನ ವ್ಯಂಗ್ಯದ ಮಾತು ಹೆಚ್ಚು ಉಲ್ಲೇಖಿಸಲ್ಪಟ್ಟಿದೆ. ಉದಾ; 'ಚರಣ ನಿನಗೆ ಬಲು ನೋವಾಯಿತಲ್ಲ'

ಸುಮಾರು 19ನೆ ಶತಮಾನದಲ್ಲಿ ನೂತನ ಹೆಜ್ಜೆಯಿಟ್ಟ ಕವಿ ಮುದ್ದಣ್ಣನ "ಕುಮಾರ ವಿಜಯ" ಉತ್ತಮ ಛಂದಸ್ಸು, ಹಾಗೂ ವೈವಿಧ್ಯಮಯ ರಾಗ ತಾಳದಿಂದ ಗಮನ ಸೆಳೆಯುತ್ತದೆ. "ರತ್ನಾವತಿ ಕಲ್ಯಾಣ" ಪುರಾಣಾಂತರ್ಗತ ಕಥೆ ಅಲ್ಲದಿದ್ದರೂ ಪ್ರದರ್ಶನ ಯೋಗ್ಯವಾದ ಸಾಹಿತ್ಯದಿಂದ ಕೂಡಿದ ಕೃತಿಯಾಗಿದೆ. ಉಪಮ, ರೂಪಕ, ಅಲಂಕಾರಗಳಿಂದ ಕೂಡಿದ ಪದ್ಯಗಳಲ್ಲಿ ಶೃಂಗಾರ, ವೀರ, ರೌದ್ರ, ಕರುಣಾ ರಸಗಳು ಬಿಂಬಿತವಾಗಿವೆ

ಯಕ್ಷಗಾನದ ಆಧುನೀಕರಣದಿಂದ ಪ್ರಸಂಗ ರಚನೆಯಲ್ಲಿ ಪರಿಷ್ಕರಣೆ ಉಂಟಾದವು. ಪುರಾಣ ಕಥೆ ಆಯ್ಕೆ ಮಾಡುವುದು ಕಷ್ಟವಾದಾಗ ಯಕ್ಷಗಾನಕ್ಕೆ ಒಪ್ಪುವ ಪುರಾಣಾಂತರ್ಗತ ಪ್ರಸಂಗಗಳು ಬಂದವು. ಇಡಗುಂಜಿ ಮೇಳದವರ "ಬ್ರಹ್ಮ ಕಪಾಲ" ಸತ್ಯ ಹರಿಶ್ಚಂದ್ರ, "ರಾಮ ನಿರ್ಯಾಣ ""ವಾಸವದತ್ತೆ" ಸಾಲಿಗ್ರಾಮ ಮೇಳದವರ 'ವಸಂತ ಸೇನೆ" 'ಚಂದ್ರ ಹಾಸ' ವೀರಭದ್ರ ನಾಯಕರ 'ಬೇಡರ ಕಣ್ಣಪ್ಪ' ಇವುಗಳನ್ನು ಈ ಸಾಲಿಗೆ ಸೇರಿಸಬಹುದು. ನಂತರದ ಕಾಲದಲ್ಲಿ ವೃತ್ತಿ ಮೇಳಗಳು ವ್ಯಾಪಾರೀಕರಣ ದೃಷ್ಟಿಯಿರಿಸಿಕೊಂಡು ಪ್ರದರ್ಶನ ನೀಡುವಾಗ ಪೌರಾಣಿಕವಲ್ಲದ ಹೊಸ ಪ್ರಸಂಗಗಳು ಅನಿವಾರ್ಯವಾದವು. ಅದರಲ್ಲಿ ಬಡಗುತಿಟ್ಟಿನ ಕಾಳಿಂಗ ನಾವಡ ವಿರಚಿತ 'ನಾಗಶ್ರೀ' ಮತ್ತು ತೆಂಕುತಿಟ್ಟಿನ ಅನಂತರಾಮ್ ಬಂಗಾಡಿ ವಿರಚಿತ 'ಕಾಡಮಲ್ಲಿಗೆ' ಪ್ರಸಂಗಗಳು ದಾಖಲೆ ನಿರ್ಮಿಸಿವೆ. ಬಳಿಕ ವೃತ್ತಿಮೇಳಕ್ಕೆ ಕಂದಾವರ ರಘುರಾಮ ಶೆಟ್ಟರ ರತಿರೇಖ, ಬನಶಂಕರಿ, ಚೆಲುವೆ ಚಿತ್ರಾವತಿ ,ಶೂದ್ರ ತಪಸ್ವಿನಿ, ವಧುಮಾದವಿ, ಚಂದ್ರಶೇಖರ ಶೆಟ್ಟರ ರಾಜನರ್ತಕಿ, ಚೈತ್ರಪಲ್ಲವಿ, ಪದ್ಮಪಲ್ಲವಿ, ರಂಗ ನಾಯಕಿ ಪ್ರಸಂಗಗಳು ಅದ್ಬುತ ಯಶಸ್ಸನ್ನು ತಂದುಕೊಟ್ಟವು. ಹಾಗೆಯೇ ತೆಂಕುತಿಟ್ಟಿನಲ್ಲಿ ಅಮೃತ ಸೋಮೇಶ್ವರರ ಹಾಗು ರಾಘವ ನಂಭಿಯಾರರ ಪೌರಾಣಿಕ ನೆಲೆಗಟ್ಟನ್ನು ಹೊಂದಿದ ಛಂದೋ ಬದ್ದವಾದ ಪ್ರಸಂಗಗಳು ಅದ್ಬುತ ಯಶಸ್ಸನ್ನು ಹೊಂದಿದವು. ಇವೆಲ್ಲವೂ ಪ್ರದರ್ಶನ ಯೋಗ್ಯ ಪ್ರಸಂಗವೆನ್ನುವಲ್ಲಿ ಎರಡು ಮಾತಿಲ್ಲ. ಇಷ್ಟೆಲ್ಲ ಇದ್ದರೂ ಯಕ್ಷಗಾನ ಸಾಹಿತ್ಯವನ್ನು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಡೆಗಣಿಸಿದ್ದು ನಮ್ಮ ದೌರ್ಭಾಗ್ಯವೇ ಸರಿ. ಈ ಕಲೆ ಜಾನಪದವಾಗಿ ಉಳಿಯಲು ಇದೂ ಒಂದು ಕಾರಣವಿರಬಹುದು.

ಕೆಲವು ಪ್ರಸಂಗಗಳು ರಂಗದಲ್ಲಿ ಯಶಸ್ಸು ಕಂಡರೂ ಕೃತಿಯಲ್ಲಿ ಕಳಪೆಯಾಗಿರುತ್ತದೆ. ಛಂದೋಬದ್ದವಾಗಿ ಓದುವುದು, ಹಾಡುವುದು ಕಷ್ಟವಾಗುತ್ತದೆ. ಪದ್ಯಗಳು ಸೀಮಿತವಾದಾಗ ಪಾತ್ರ ಪೋಷಣೆ ಸಮರ್ಪಕವಾಗದೆ ಪ್ರದರ್ಶನ ಸಂದರ್ಭದಲ್ಲಿ ಕಲಾವಿದನಿಗೆ ಹೆಚ್ಚಿನ ಹೊರೆ ಬೀಳುತ್ತದೆ. ಇಂದಿನವರೆಗೆ ಸಾವಿರಕ್ಕೂ ಅಧಿಕ ಪ್ರಸಂಗ ರಚನೆಯಾದರೂ ಪ್ರದರ್ಶನಗೊಂಡವು ಕೆಲವು ಮಾತ್ರ. ಯಾಕೆಂದರೆ ಕೆಲವು ಕವಿಗಳು ಪ್ರಸಂಗವನು ್ಕಾವ್ಯದಂತೆ ರಚಿಸಿದ್ದಾರೆ. ಯಕ್ಷಗಾನ ಕೃತಿಯನ್ನು ಕನ್ನಡ ಕಾವ್ಯಕ್ಕೇ ಹೋಲಿಸಿ ಸಮಾನತೆ ನೀಡಿದಲ್ಲಿ ಯಕ್ಷಗಾನಾಸಕ್ತರು ಧನ್ಯರಾಗುತ್ತಾರೆ. ಪ್ರಸಂಗ ಕೃತಿಯು ಕಾವ್ಯದ ಗುಣ ಸ್ವರೂಪ ಹೊಂದಿದಾಗಲೂ ಅದನು ್ಕಾವ್ಯವೆಂದೋ ಸಾಹಿತ್ಯ ಕೃತಿಯೆಂದು ಜನ ಯಾಕೆ ಒಪ್ಪುವುದಿಲ್ಲ. ಕನ್ನಡ ಸಾಹಿತ್ಯದಲ್ಲಿ ನಾಟಕವೂ ಒಂದು.ಆಧುನಿಕ ಬರಹಗಾರರು ಅನೇಕ ನಾಟಕ ರಚನೆ ಮಾಡಿ ಸಾಹಿತ್ಯಕ್ಕೆ ಕೀರ್ತಿ ತಂದಿದ್ದಾರೆ. ನಾಟಕಕ್ಕೂ ಯಕ್ಷಗಾನ ಸಾಹಿತ್ಯಕ್ಕೂ ಬಹಳ ಸಾಮ್ಯವಿದೆ. ಸಂಗೀತ ನಾಟಕದಲ್ಲಿ ಅಲ್ಲಲ್ಲಿ ಹಾಡುಗಳಿವೆ.

ನಾಟಕವು ಗದ್ಯ ಪ್ರಧಾನವಾದರೆ ಯಕ್ಷಗಾನವು ಪದ್ಯ ಪ್ರಧಾನ. ನಾಟಕದಲ್ಲಿ ಬರೆದ ಮಾತುಗಳನ್ನೇ ಪಾತ್ರಧಾರಿ ಆಡುತ್ತಾನೆ. ಯಕ್ಷಗಾನ ಪದ್ಯಕ್ಕೆ ಒಬ್ಬೊಬ್ಬ ಪಾತ್ರಧಾರಿಯ ಮಾತು ಒಂದೊಂದು ತರಹವಿರುತ್ತದೆ. ಕಥೆಗೆ ಉಚಿತವೆನಿಸುವ ಮಾತನ್ನು ಸ್ವಯಂ ಸೃಷ್ಟಿಸಿ ಮಾತನಾಡುತ್ತಾನೆ. ಆದುದರಿಂದ ಯಕ್ಷಗಾನವು ಸರ್ವಾಂಗವೂ ಇರುವ ನಾಟಕವಾಗಿದೆ " ಕಿರಿದರೊಳ್ ಪಿರಿದಾರ್ಥ" ನೀಡುವುದು ಯಕ್ಷಗಾನ ಪದ್ಯಗಳ ವೈಶಿಷ್ಯ.

***ಕಾಲ್ಪನಿಕ ಮತ್ತು ಪ್ರಕ್ಷಿಪ್ತ ಪ್ರಸಂಗಗಳು;***

ನಾಲ್ಕೈದು ದಶಕಗಳ ಹಿಂದೆ ಪ್ರಕ್ಷಿಪ್ತ ಪ್ರಸಂಗಗಳು ಅನೇಕರಿಗೆ ಅಸ್ಪೃಶ್ಯವಾಗಿದ್ದವು. ಈ ರೀತಿಯ ಪ್ರಸಂಗಗಳನ್ನು ಪ್ರದರ್ಶಿಸುವುದಾಗಲಿ, ನೋಡುವುದಾಗಲಿ ಪುರಾಣಗಳಿಗೆ ಮಾಡುವ ಅಪಚಾರ ಮಾತ್ರವಲ್ಲ ನೋಡುಗರನ್ನು ಅಪಮಾರ್ಗಕ್ಕೆಳೆಯುವ ಪಾಪ ಕಾರ್ಯವೆಂದು ತಿಳಿಯುವವರಿದ್ದರು. "ಕೃಷ್ಣಾರ್ಜುನ ಕಾಳಗ"ದಂತ ಪುರಾಣವಲ್ಲದ ಪ್ರಸಂಗದಲ್ಲಿ ಅರ್ಥ ಹೇಳಲಾರೆ ನೆಂದು ತಾಳಮದ್ದಳೆಯಿಂದ ಹೊರಟು ಹೋದ ಕಲಾವಿದರನ್ನು ನಾನು ನೋಡಿದ್ದೆನೆ ಎಂದು ಖ್ಯಾತ ಅರ್ಥಧಾರಿ ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿಯವರು ಉಲ್ಲೇಖಿಸುತ್ತಾರೆ. (ನೋಡಿ; ಬಂಟರ ಯಕ್ಷಗಾನ ಕಲೋತ್ಸವ ಸ್ಮರಣ ಸಂಚಿಕೆ 'ಒಡ್ಡೋಲಗ' ಪುಟ254). ಹಾಗಿದ್ದಲ್ಲಿ ಆಟ ಕೂಟದಲ್ಲಿ ಮೆರದ, ಅರ್ಜುನನ ಪಾತ್ರದಿಂದ ಮೇಲ್ಮಟ್ಟದ ಕಲಾವಿದರೆಂದು ಗುರುತಿಸಲ್ಪಟ್ಟ ಹಾರಾಡಿ ರಾಮ ಗಾಣಿಗರಿಗೆ, ಕೆರೆಮನೆ ಮಹಾಬಲ ಹೆಗಡೆಯವರಿಗೆ ಕೀರ್ತಿ ತಂದು ಕೊಟ್ಟ ಪ್ರಸಂಗ ಪ್ರಕ್ಷಿಪ್ತ ಎಂದಾಯಿತು. ಅವರೇ ಹೇಳುವಂತೆ "ದಶರಥನು ಗುಟ್ಟಾಗಿ ರಾಮ ಪಟ್ಟಾಭಿಷೇಕ ನಿಶ್ಚಯಿಸಿದ" "ಶೂರ್ಪನಖಿ ಹದಿನಾರು ವರುಷದ ಹೆಣ್ಣಾದಳು" "ಸೀತೆಯನ್ನು ತರುವ ಮೊದಲು ರಾವಣ ಮಂಡೋದರಿಯ ಸಲಹೆ ಕೇಳಿದ" ಇವುಗಳೆಲ್ಲ ಪ್ರಕ್ಷಿಪ್ತ ಎಂದಾಯಿತು.

ಬಡಗುತಿಟ್ಟಿನ ನಡು ಪ್ರಾಂತ್ಯದಲ್ಲಿ ಪ್ರಸಿದ್ದಿ ಪಡೆದ ಲವ ಕುಶ ಕಾಳಗ ಅಥವಾ ಚಿತ್ರಪಠ ಸಂಧಿ ಪ್ರಸಂಗ, ಅದ್ಭುತವಾದ ಸಾಹಿತ್ಯ ಛಂದೋಬಂಧದಿಂದ ಕೂಡಿದ ರಾಮಾಂಜನೇಯ' ಅಶ್ಲೀಲತೆಯಿಂದ ಕೂಡಿದ 'ಚಂದ್ರಾವಳಿ ವಿಲಾಸ" ಶ್ವೇತಕುಮಾರ', ಆರು ಬಾರಿಗೂ ಹೆಚ್ಚು ಮುದ್ರಣಗೊಂಡು ಬಯಲಾಟಕ್ಕೆ ಹೇಳಿ ಮಾಡಿಸಿದ ಹಲಸಿನ ಹಳ್ಳಿ ನರಸಿಂಹ ಶಾಸ್ತ್ರಿಗಳ 'ವೀರಮಣಿ ಕಾಳಗ' ಪದ್ಮಪುರಾಣದಿಂದ ಆರಿಸಿದರೂ ಮೂಲ ರಾಮಾಯಣಕ್ಕೆ ಸಂಬಂದಿಸಿದ್ದಲ್ಲ. ವಿಶ್ವಾಮಿತ್ರ ಹೇಳಿದ ತಕ್ಷಣ ಶ್ರೀರಾಮನು ಶಕುಂತನನ್ನು ಕೊಲ್ಲಲು ಮುಂದಾದದ್ದು ಪ್ರಕ್ಷಿಪ್ತದ ಪರಮಾವಧಿಯನ್ನು 'ರಾಮಾಂಜನೇಯದಲ್ಲಿ' ಗಮನಿಸಬಹುದು.

ಕನಕಾಂಗಿ ಕಲ್ಯಾಣದ ಪಡಿಯಚ್ಚು ಎನ್ನಬಹುದಾದ ಇನ್ನೊಂದು ಪ್ರಸಂಗ ಮೈಂದ ದಿವಿಜ ಕಾಳಗ ಅಥವಾ ರುಕ್ಮಾವತಿ ಕಲ್ಯಾಣ. ಬಲರಾಮನ ಮಗಳು ಕನಕಾಂಗಿಯನ್ನು ಅಭಿಮನ್ಯುವಿಗೆ ಕೇಳಲು ಹೋಗುತ್ತಳೆ ಸುಭದ್ರೆ, ಘಟೋತ್ಕಜನ ಮಾಯೆಯಿಂದ ಕನಕಾಂಗಿ ಅಭಿಮನ್ಯುವರ ವಿವಾಹ ನೆರವೇರುತ್ತದೆ. ಅಭಿಮನ್ಯುವಿನ ಹೆಂಡತಿ ಉತ್ತರೆಯೊ ಅಥವಾ ಕನಕಾಂಗಿಯೋ? ಅಣ್ಣ ರುಕ್ಮನ ಮಗಳನ್ನು ಮಗನಾದ ಮನ್ಮಥನಿಗೆ ಕೇಳಲು ಹೋಗುವುದು. ರುಕ್ಮಿಣಿ.ಬಳಿಕ ಯಾದವರಿಗೂ ಕುಂಡಿನಪುರದವರಿಗೂ ಯುದ್ದವಾಗಿ ಮನ್ಮಥನೊಂದಿಗೆ ರುಕ್ಮಾವತಿಯ ಕಲ್ಯಾಣವಾಗುತ್ತದೆ. ಇಲ್ಲಿಯೂ ಅದೇ ಪ್ರಶ್ನೆ ಮನ್ಮಥನ ಹೆಂಡತಿ ರತಿಯೇ? ಇಲ್ಲಾ ರುಕ್ಮಾವತಿಯೇ? ಅಲ್ಲಿ ಅಭಿಮನ್ಯು ಬಲರಾಮನ ಸೋದರಳಿಯ, ಇಲ್ಲಿ ಮನ್ಮಥನು ರುಕ್ಮನ ಸೋದರಳಿಯ. ಸೋದರಿಕೆಯ ಸಮಕಾಲೀನ ಅದ್ಭುತ ಕಲ್ಪನೆಯೊಂದಿಗೆ ಮೂಡಿ ಬಂದ ಈ ಪ್ರಸಂಗಗಳೆರಡು ರಂಗದಲ್ಲಿ ಜೋಡಾಟದಲ್ಲಿ, ಯಶಸ್ವಿಯಾಗಿದೆ ಎಂಬಲ್ಲಿ ಕಾಲ್ಪನಿಕವಾಗಲಿ, ಪ್ರಕ್ಷಿಪ್ತವಾಗಲಿ ಯಕ್ಷಗಾನದ ಚೌಕಟ್ಟಿನೊಳಗೆ ಮೂಡಿ ಬಂದ ಪ್ರಸಂಗಗಳು ಸ್ವೀಕಾರಾರ್ಹವೆ. ಪ್ರಕ್ಷಿಪ್ತವಾದರೇನು? ಕಾಲ್ಪನಿಕವಾದರೇನು? ಮೂಲವಾದರೇನು? ಒಳ್ಳೆಯ ಅದರ್ಶವನ್ನು ಜನಕೋಟಿಗೆ ನೀಡುವ ಯಕ್ಷಗಾನದ ಚೌಕಟ್ಟಿಗೆ ಒಪ್ಪುವ ಪ್ರಸಂಗಗಳನ್ನು ಪ್ರಾಮಾಣಿಕವಾಗಿ ಸ್ವೀಕರಿಸಬಹುದು.

***ಪ್ರೊ.ಎಸ್.ವಿ.ಉದಯಕುಮಾರ ಶೆಟ್ಟಿ ಪ್ರಾಧ್ಯಾಪಕರು, ಎಂ.ಐ.ಟಿ.ಮಣಿಪಾಲ***

## ಧೀರ ಕಲೆಯೊಳಗೆ ಕೀರವಾಣಿಯರು 07



***ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ವಿಜೇತೆ – ಶ್ರೀಮತಿ ಪೂರ್ಣಿಮಾ ಯತೀಶ್ ರೈ***

ತೆಂಕುತಿಟ್ಟು ಯಕ್ಷಗಾನದ ಮಹಿಳಾ ಕಲಾವಿದರಲ್ಲಿ 'ಮಹಿಷ'ನ ಪಾತ್ರಕ್ಕೆ ವಿಶೇಷ ಜೀವಕಳೆ ಕೊಟ್ಟವರು ಶ್ರೀಮತಿ ಪೂರ್ಣಿಮಾ ಯತೀಶ್ ರೈ ಮುಖೇನ ಮನೆಮನೆ ಮಾತಾದವರು. ಅದೆಷ್ಟೋ ಮಹಿಳಾ ಕಲಾವಿದರನ್ನು ಮಾತ್ರವಲ್ಲದೇ ಪುರುಷ ಕಲಾವಿದರಿಗೂ ಸಮರ್ಥ ಗು ಯಕ್ಷರಂಗಕ್ಕೆ ನೀಡಿದ ಹಿರಿಮೆ ಇವರದು. ಸದ್ಗೃಹಿಣಿಯಾಗಿ, ಕಲಾವಿದೆಯಾಗಿ, ನಿರ್ದೇಶಕಿಯಾಗಿ, ಸಂಘಟಕಿಯಾಗಿ, ಗುರುವಾಗಿ, ಉದ್ಯಮಿಯಾಗಿ, ಸಮಾಜಸೇವಕಿಯಾಗಿ ಹೀಗೆ ಅನೇಕ ಕ್ಷೇತ್ರಗಳಲ್ಲಿ ಗುರುತಿಸಿಕೊಂಡವರಾದರೂ ಒಂದಿಷ್ಟೂ ಅಹಂ ಇವರಲ್ಲಿಲ್ಲ.

ದಿ. ಸೇಸಪ್ಪ ಬಿ. ಶೆಟ್ಟಿ ಬಾಳ ಹಾಗೂ ಶಾರದಾ ಎಸ್. ಶೆಟ್ಟಿ ಇವರ ಮಗಳಾಗಿ 08–12–1974 ರಲ್ಲಿ ಮಧ್ಯ–ಕಾಟಿಪಳ್ಳದ ಬಾಳದಲ್ಲಿ ಜನಿಸಿದ ಇವರು ಬಿಕಾಂ ಪದವೀಧರರು. ಯಕ್ಷಗಾನ, ಜಾನಪದ ನೃತ್ಯ, ಕ್ರೀಡಾ ಚಟುವಟಿಕೆಗಳು, ನಾಟಕ ಮುಂತಾದ ಹೆಚ್ಚಿನ ಕ್ಷೇತ್ರಗಳಲ್ಲಿ ಎಳವೆಯಿಂದಲೇ ಬಹು ಆಸಕ್ತಿಯಿಂದ ತಮ್ಮನ್ನು ತಾವು ತೊಡಗಿಸಿಕೊಂಡವರು. ಕ್ರಮೇಣ ಹವ್ಯಾಸಿ ಯಕ್ಷಗಾನ ಕಲಾವಿದರೂ, ಉದ್ಯಮಿಯೂ, ಯಕ್ಷಗಾನ ಸಂಘಟಕರೂ, ಪೋಷಕರೂ ಆದಂತಹ, ತಮ್ಮ ಅಣ್ಣನಾದ ಬಾಳ ಮಾಧವ ಎಸ್. ಶೆಟ್ಟಿಯವರ ಪ್ರೇರಣೆ ಹಾಗೂ ಪ್ರೋತ್ಸಾಹದಿಂದ ಯಕ್ಷಗಾನ ಕ್ಷೇತ್ರದಲ್ಲಿ ವಿಶೇಷವಾಗಿ ಗುರುತಿಸಿಕೊಳ್ಳುವುದಕ್ಕೆ ಸಾಧ್ಯವಾಯಿತು ಎನ್ನುತ್ತಾರೆ ಪೂರ್ಣಿಮಾ ರೈಯವರು.

ಶ್ರೀ ರಮೇಶ್ ಶೆಟ್ಟಿ ಬಾಯಾರು ಮತ್ತು ಶ್ರೀ ಶಿವರಾಮ ಪಣಂಬೂರು ಇವರಲ್ಲಿ ಯಕ್ಷಗಾನ ಮುಮ್ಮೇಳದ ಸರ್ವಾಂಗಗಳನ್ನೂ ಹಾಗೂ ಶ್ರೀ ಹರಿನಾರಾಯಣ ಬೈಪಾಡಿತ್ತಾಯ ಹಾಗೂ ಶ್ರೀಮತಿ ಲೀಲಾವತಿ ಬೈಪಾಡಿತ್ತಾಯ ದಂಪತಿಗಳು ಮತ್ತು ಶ್ರೀ ಮಾಂಬಾಡಿ ಸುಬ್ರಹ್ಮಣ್ಯ ಭಟ್ಟರಿಂದ ಯಕ್ಷಗಾನದ ಹಿಮ್ಮೇಳವನ್ನೂ ಅಭ್ಯಸಿಸಿ, ತಮ್ಮ ಯಕ್ಷಗಾನದ ಆಸಕ್ತಿಯನ್ನು ಗಟ್ಟಿಗೊಳಿಸಿದರು. 1988ರ ಡಿಸೆಂಬರ್ ನಲ್ಲಿ 'ಪುಣ್ಯಕೋಟಿ' ಪ್ರಸಂಗದ ಗಂಗೆ' ಎಂಬ ಪಾತ್ರದ ಮೂಲಕ ಮೊದಲ ಬಾರಿಗೆ ಯಕ್ಷಗಾನ ರಂಗ ಪ್ರವೇಶ ಮಾಡಿದರು.

1989 ರಲ್ಲಿ ಶ್ರೀ ಮಾಧವ ಎಸ್. ಶೆಟ್ಟಿ ಬಾಳ ಇವರ ನೇತೃತ್ವದಲ್ಲಿ ಶ್ರೀ ಮಹಾಗಣಪತಿ ಮಹಿಳಾ ಯಕ್ಷಗಾನ ಸಂಘ, ಬಾಳ, ಕಾಟಿಪಳ್ಳ ತಂಡ ರೂಪುಗೊಂಡು 'ಅಭಿಮನ್ಯು ಕಾಳಗ' ಪ್ರಸಂಗವನ್ನು ಪ್ರದರ್ಶಿಸಿತು. ಇದರಲ್ಲಿ ಸಾರಥಿಯ ಪಾತ್ರವನ್ನು ಪೂರ್ಣಿಮಾ ರೈಯವರು ನಿರ್ವಹಿಸಿದರು. ಆ ಬಳಿಕ ಯಕ್ಷಗಾನದಿಂದ ಹಿಂದೆ ಸರಿದದ್ದೇ ಇಲ್ಲ. ಅನೇಕ ಯಕ್ಷಗಾನ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಬಹುಮಾನಗಳನ್ನೇ ಬಾಚಿಕೊಂಡ ಹೆಗ್ಗಳಿಕೆ ಇವರದು. ಲಂಡನ್

ಯಕ್ಷಗಾನ ಸ್ಪರ್ಧೆಯಲ್ಲೂ ಅಂತಿಮ ಸುತ್ತಿಗೆ ಆಯ್ಕೆಯಾದ ಮಹಿಳಾ ತಂಡ ಇವರ ನೇತೃತ್ವದ್ದು ಎಂಬುದು ಮತ್ತೊಂದು ಹೆಮ್ಮೆಯ ಸಂಗತಿ.

ಚೆಲ್ಯಡ್ಕ ನುಳಿಯಾಲು ಕುಟುಂಬದ ವೃತ್ತಿಯಲ್ಲಿ ಇಂಜಿನಿಯರ್ ಆಗಿರುವ ಶ್ರೀ ಯತೀಶ್ ರೈಯವರನ್ನು ಕೈ ಹಿಡಿದ ಬಳಿಕವೂ ಇವರ ಯಕ್ಷ ಪಯಣಕ್ಕೇನೂ ಅಡ್ಡಿಯಾದದ್ದಿಲ್ಲ. ಮದುವೆಯಾದ ಬಳಿಕ ಇನ್ನೂ ಹೆಚ್ಚಿನ ರೀತಿಯಲ್ಲೇ ಯಕ್ಷಗಾನದಲ್ಲಿ ತೊಡಗಿಸಿಕೊಂಡವರಿವರು. ಶ್ರೀ ಯತೀಶ್ ರೈಯವರೂ ಯಕ್ಷಗಾನಾಸಕ್ತರು. ವೇಷ ಮಾಡಿದ ಅನುಭವವೂ ಇವರಿಗಿದೆ. ಮಕ್ಕಳಾದ ಸಾಕ್ಷ ಹಾಗೂ ಸಾತ್ವಿಕ್ ಕೂಡ ಈ ರಂಗದಲ್ಲಿ ತೊಡಗಿಸಿಕೊಂಡವರು. ತಮ್ಮ ತಾಯಿಮನೆ ಹಾಗೂ ಗಂಡನ ಮನೆಯ ಪ್ರೋತ್ಸಾಹ ಪೂರ್ಣಿಮಾ ರೈಯವರನ್ನು ಇಷ್ಟರ ಮಟ್ಟಿಗೆ ಗುರುತಿಸಿಕೊಳ್ಳುವ ಹಾಗೆ ಮಾಡಿತು ಎಂದು ಹೇಳುವುದನ್ನು ಇವರು ಎಂದೂ ಮರೆಯುವುದಿಲ್ಲ.




ಸುಧನ್ವಾರ್ಜುನ, ಬಭ್ರುವಾಹನ, ಅಭಿಮನ್ಯು, ದಕ್ಷಯಜ್ಞ, ಶ್ರೀ ದೇವಿ ಮಹಾತ್ಮೆ, ಜಾಂಬವತೀ, ಅಂಬಾ ಶಪಥ, ವೀರಮಣಿ, ತಾರಕಾಸುರ, ಭೀಷ್ಮಪ್ರತಿಜ್ಞೆ, ಕನಕಾಂಗಿ ಕಲ್ಯಾಣ, ಪಾಂಚಜನ್ಯ, ಕರ್ಣಾರ್ಜುನ, ನರಕಾಸುರ, ಇಂದ್ರಜಿತು, ತಾಮ್ರಧ್ವಜ, ರುಕ್ಮಾಂಗದ, ಸುದರ್ಶನ, ಭಾರ್ಗವ ವಿಜಯ ಮುಂತಾದ ಅನೇಕ ಪೌರಾಣಿಕ ಪ್ರಸಂಗಗಳಲ್ಲಿ ಪಾತ್ರ ನಿರ್ವಹಿಸಿದ್ದಲ್ಲದೇ, ಕೋಟಿ–ಚೆನ್ನಯ, ಧರ್ಮಗದ್ದಿಗೆ, ಸ್ವಾಮಿಭಕ್ತ ಮಂಜಣ್ಣೆ, ಬ್ರಹ್ಮಬೈದ್ಯೆರ್, ತುಳುನಾಡಸಿರಿ ,ಮುಂತಾದ ತುಳು ಪ್ರಸಂಗಗಳು, ಶ್ರೀಅಮೃತ ಸೋಮೇಶ್ವರ ವಿರಚಿತ 'ಪ್ರಜ್ಞಾವಿಜಯ'ದಂತಹ ಸಾಮಾಜಿಕ ಪ್ರಸಂಗಗಳಲ್ಲೂ ಪಾತ್ರ ನಿರ್ವಹಿಸಿ ಜನ ಮೆಚ್ಚುಗೆ ಪಡೆದವರು ಇವರು.




**ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ವಿಜೇತೆ – ಪೂರ್ಣಿಮಾ ಯತೀಶ್ ರೈ**

ದಕ್ಷ, ಅರ್ಜುನ, ಸಾಲ್ವ, ಕರ್ಣ, ಕೌರವ, ಜಾಂಬವ, ರಕ್ತಬೀಜ, ಕಾರ್ತವೀರ್ಯ, ಶಂತನು, ಇಂದ್ರಜಿತು, ಹಿರಣ್ಯಾಕ್ಷ, ಕೌಂಡ್ಲಿಕ, ವೀರಮಣಿ, ಶತ್ರುಘ್ನ ಮುಂತಾದ ಕಿರೀಟ ವೇಷಗಳು, ಮಹಿಷಾಸುರ, ಶುಂಭ, ನರಕಾಸುರ, ತಾರಕಾಸುರ, ಶತ್ರುಪ್ರಸೂದನ, ಯಮ ಇತ್ಯಾದಿ ಬಣ್ಣದ ವೇಷಗಳು, ಅಜಮುಖಿ, ಪೂತನಿ, ಶೂರ್ಪನಖಿಯಂತಹ ಹೆಣ್ಣುಬಣ್ಣಗಳು, ಕಂಸ, ಭಸ್ಮಾಸುರನಂತಹ ನಾಟಕೀಯ ಪಾತ್ರಗಳು, ಕೋಟಿ, ಚೆನ್ನಯ, ಮಂಜಣ್ಣೆ, ಕಾಂತಣ್ಣ ಪೂಂಜನಂತಹ ಪಾತ್ರಗಳು, ಮಾರ್ತಾಂಡತೇಜ, ಪ್ರದ್ಯುಮ್ನ, ವೃಷಕೇತುವಿನಂತಹ ಪಕಡಿವೇಷಗಳು, ಶ್ರೀದೇವಿ, ಕೌಶಿಕೆ, ಗಂಗೆಯಂತಹ ಸ್ತ್ರೀ ಪಾತ್ರಗಳು, ಮಾಲಿನಿದೂತ, ದೇವದೂತ, ಪೊಲಿಬಾಲೆಯಂತಹ ಹಾಸ್ಯಪಾತ್ರಗಳು ಹೀಗೆ ಯಕ್ಷರಂಗದ ಎಲ್ಲಾ ರೀತಿಯ ಪಾತ್ರಗಳನ್ನು ನಿರ್ವಹಿಸಿದ ಅನುಭವ ಇವರಲ್ಲಿದೆ. ಪೂರ್ಣಿಮಾ ಯತೀಶ್ ರೈಯವರ ಮಹಿಷಾಸುರನನ್ನು ಕಂಡು ಸ್ವತಃ ಶ್ರೀಕುಂಬಳೆ ಸುಂದರರಾಯರೇ "ರಂಗದಲ್ಲಿ ನಿನಗೇನು ಮಹಿಷಾಸುರನ ಆವೇಶವಾಗುತ್ತದಾ? ಆ ರೀತಿಯಲ್ಲಿ ಕುಣಿಯುತ್ತಿಯಲ್ಲಾ " ಎಂದು ಅಚ್ಚರಿ ವ್ಯಕ್ತ ಪಡಿಸಿದ್ದರಂತೆ. ದಿ. ಗೇರುಕಟ್ಟೆ ಗಂಗಯ್ಯ ಶೆಟ್ರು "ಯಕ್ಷಗಾನ ಮೇಳಗಳಲ್ಲೂ ನಿನ್ನಂತಹ ಮಹಿಷಾಸುರ ಕಾಣಸಿಗಲಾರದು" ಎಂದಿದ್ದರಂತೆ. ಪ್ರೊ. ಅಮೃತ ಸೋಮೇಶ್ವರರು ಇವರ ಕಿರೀಟ ವೇಷಗಳನ್ನು ಮೆಚ್ಚಿ ಮಾತನಾಡಿದ್ದರಂತೆ. ಇವರ ಗುರುಗಳಾದ ಶ್ರೀ ರಮೇಶ್ ಶೆಟ್ಟಿ ಬಾಯಾರು ಅವರು ಇವರ ಪಾತ್ರಗಳನ್ನು ನೋಡಿ "ಗುರುವಿಗೆ ತಕ್ಕ ಶಿಷ್ಯೆ ನೀನು" ಎಂದು ಕೊಂಡಾಡಿದ್ದರಂತೆ. ಪೂರ್ಣಿಮಾ ರೈಯವರು ಶ್ರೀಮಹಾಗಣಪತಿ ಮಹಿಳಾ ಯಕ್ಷಗಾನ ಸಂಘ ಬಾಳ, ಕಾಟಿಪಳ್ಳ, ಯಕ್ಷಗಾನ ಅಧ್ಯಯನ ಕೇಂದ್ರ ಶ್ರೀ ಗೋವಿಂದದಾಸ ಕಾಲೇಜು ಸುರತ್ಕಲ್ ಮುಂತಾದವುಗಳ ನಿರ್ದೇಶಕಿ, ಯಕ್ಷಮಣಿ ಕಲಾತಂಡ ಚೇಳಾರು, ಕಲಾಕುಂಭ ಯಕ್ಷವೃಂದ ಕುಳಾಯಿ ಹಾಗೂ ಅನೇಕ ಶಾಲೆಗಳಲ್ಲಿ, ಮಹಿಳಾ ಮಂಡಲಗಳಲ್ಲಿ ಯಕ್ಷಗಾನ ಗುರುಗಳು, ಅಲ್ಲದೇ ಅನೇಕ ಕಡೆಗಳಲ್ಲಿ ಯಕ್ಷಗಾನ ನಿರ್ದೇಶನ, ಅತಿಥಿ ಕಲಾವಿದೆಯಾಗಿಯೂ ಅನೇಕ ತಂಡಗಳಲ್ಲಿ ಭಾಗವಹಿಸಿದವರಿವರು. ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳಲ್ಲಿ ಮಾತ್ರವಲ್ಲದೇ, ಕುಂದಾಪುರ, ಶಿವಮೊಗ್ಗ, ಹುಬ್ಬಳ್ಳಿ, ಗದಗ, ಬೆಂಗಳೂರು, ಚೆನ್ನೈ, ಮುಂಬೈಯಂತಹ ಮಹಾನಗರಗಳಲ್ಲೂ ಯಕ್ಷ ಸುಗಂಧವನ್ನು ಹರಡಿಸಿದ್ದಾರೆ.

ಯಕ್ಷಪೂರ್ಣಿಮಾ ಎಂಬ ಬಿರುದಾಂಕಿತರು ಇವರು. ಕಿತ್ತೂರು ರಾಣಿ ಚೆನ್ನಮ್ಮ, ಕರ್ನಾಟಕ ರಾಜ್ಯ ಪ್ರಶಸ್ತಿ – 2015–16, ಕರ್ನಾಟಕ ಯಕ್ಷ ಮಹಿಳಾರತ್ನ, ವಿಶ್ವ ತೌಳವ ಸಿರಿ. ಯಕ್ಷಲಕ್ಷ್ಮಿ, ಯಕ್ಷರಕ್ಷ, ಯಕ್ಷಧ್ರುವ, ಯಕ್ಷಕಲಾರಾಧಕಿ, ಯಕ್ಷಪ್ರತಿಭೆ, ಪ್ರೇಮನಾರಾಯಣಿ, ಯಕ್ಷಸಾಧಕಿ, ಯಕ್ಷಪ್ರಮೀಳಾ, ಬಿಮ್ಸ್ ಪ್ರಶಸ್ತಿ, ಯಕ್ಷಾನುಗ್ರಹ, ಯಕ್ಷ ಕಲಾಕೈಂಕರ್ಯ, ಗುರುದೇವಾನುಗ್ರಹ ಪ್ರಶಸ್ತಿ, ಮುಂತಾದ ಅನೇಕ ಪ್ರಶಸ್ತಿಗಳ ಜೊತೆಗೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾನೂನು ಕಾಲೇಜಿನ 'ರಜತಸಂಭ್ರಮ'ದಲ್ಲಿ "ಯಕ್ಷಶಿಕ್ಷಕಿ" ಪುರಸ್ಕಾರ ಪಡೆದವರು. ಲಯನ್ಸ್ ಇಂಟರ್ ನ್ಯಾಷನಲ್ ಅವಾರ್ಡ್, ರೋಟರಿ ಕ್ಲಬ್ ಅವಾರ್ಡ್, ಸಮಾಜಸೇವಕಿ ಪ್ರಶಸ್ತಿಯೂ ಇವರಿಗೆ ಲಭಿಸಿದೆ. ಇಷ್ಟು ಮಾತ್ರವಲ್ಲದೇ ಅನೇಕ ಸಂಘ– ಸಂಸ್ಥೆಗಳು ಇವರನ್ನು ಗೌರವಿಸಿವೆ, ಪುರಸ್ಕರಿಸಿವೆ.

ಯಕ್ಷಧ್ರುವ ಪಟ್ಲ ಫೌಂಡೇಶನ್ ನ ಕೇಂದ್ರೀಯ ಮಹಿಳಾ ಘಟಕದ ಅಧ್ಯಕ್ಷೆಯಾಗಿ ಗುರುತಿಸಿಕೊಂಡವರು, ಬಂಟರಸಂಘಸುರತ್ಕಲ್ ನ ಸಕ್ರಿಯ ಸದಸ್ಯೆ ಇವರು. ಅನೇಕ ಯಕ್ಷಗಾನ ಕಲಾವಿದರಿಗೆ, ಮಹಿಳಾ ಕಲಾವಿದರಿಗೆ, ವಿದ್ಯಾರ್ಥಿಗಳಿಗೆ, ಕಷ್ಟದಲ್ಲಿರುವವರಿಗೆ, ಸಹಕಾರ, ಅನೇಕ ಕಡೆಗಳಲ್ಲಿ ಉಚಿತವಾಗಿ ಯಕ್ಷಗಾನ ಶಿಕ್ಷಣವನ್ನು ಅನೇಕ ವರ್ಷಗಳಿಂದ ನೀಡುತ್ತಾ ಬಂದವರಿವರು. ಸರಳ–ಸಜ್ಜನ ಹೃದಯಿ, ಕಲಾಪೋಷಕಿಯಾದ ಇವರ ಯಕ್ಷಪಯಣ ಹೀಗೆ ಮುಂದುವರಿಯಲಿ ಎಂದು ಆಶಿಸೋಣ. ***–ಸಾಯಿಸುಮಾ ಎಂ. ನಾವಡ, ಕಾರಿಂಜ***

## ಯಕ್ಷ ಮೆಲುಕು

ಕಲಾವಿದರ ಯಕ್ಷಾನುಭವದ ಪ್ರಮುಖ ನೆನಪು/ಘಟನೆಗಳನ್ನು ದಾಖಲೀಕರಿಸುವ ಅಂಕಣ ಇದು. ಪ್ರತೀ ಸಂಚಿಕೆಯಲ್ಲಿ ಇಬ್ಬರು ಕಲಾವಿದರ ಅನುಭವಗಳನ್ನು ಇಲ್ಲಿ ಸಾದರಪಡಿಸುತ್ತಿದ್ದೇವೆ. ಈ ತಿಂಗಳ ಸಂಚಿಕೆಯಲ್ಲಿ ತೆಂಕು ತಿಟ್ಟಿನ ಕಲಾವಿದರಾದ **ಅಂಬಾಪ್ರಸಾದ್ ಭಟ್ ಪಾತಾಳ** ಹಾಗೂ ಬಡಗು ತಿಟ್ಟಿನ ಕಲಾವಿದರಾದ **ದಯಾನಂದ ನಾಗೂರ್** ರವರ ಅನುಭವಗಳ ತುಣುಕು ಪ್ರಕಟವಾಗಿದೆ.

**ಕಲಾವಿದರು – ಅಂಬಾಪ್ರಸಾದ್ ಭಟ್ ಪಾತಾಳ**
**ತಂದೆ – ವೆಂಕಟರಮಣ ಭಟ್ ಪಾತಾಳ**
**ತಾಯಿ – ಪರಮೇಶ್ವರಿಯಮ್ಮ**
**ಧರ್ಮಪತ್ನಿ – ದಿ. ಶಾಲಿನಿ ಮತ್ತು ಜಯಂತಿ**
**ಮಕ್ಕಳು – ವೆಂಕಟೇಶ್ವರ ಪ್ರಸನ್ನ, ತಿರುಮಲ ಪ್ರದೀಪ, ಪವಿಷಾ ಭಟ್, ಪೂರ್ಣಶ್ರೀ**
**ಯಕ್ಷಗಾನದ ಗುರುಗಳು – ಗೋವಿಂದ ಭಟ್ ಮತ್ತು ನಿಡ್ಲೆ ನರಸಿಂಹ ಭಟ್**
**ಬಣ್ಣದ ಬದುಕು ಆರಂಭ – 1979 ನೇ ಇಸವಿಯಿಂದ**
**ಸೇವೆ ಸಲ್ಲಿಸಿದ ಮೇಳಗಳು – ಧರ್ಮಸ್ಥಳ ಮೇಳ, ಸುಂಕದಕಟ್ಟೆ, ಕದ್ರಿ, ಪುತ್ತೂರು, ಎಡನೀರು, ಮಂಗಳಾದೇವಿ, ಕಾಟಿಪಳ್ಳ, ಶಿರಸಿ, ಸುರತ್ಕಲ್, ಹೊಸನಗರ ಬಾಚಕೆರೆ, ಕರ್ನಾಟಕ, ವನದುರ್ಗ ಮೇಳ**





ಸ್ತ್ರೀ ಪುರುಷ ಪಾತ್ರಗಳನ್ನೆರಡನ್ನೂ ಸಮರ್ಥವಾಗಿ ನಿರ್ವಹಿಸಬಲ್ಲ ತೆಂಕು ತಿಟ್ಟಿನ ಅಗ್ರಮಾನ್ಯ ಕಲಾವಿದರಾದ ಅಂಬಾ ಪ್ರಸಾದ್ ಪಾತಾಳರು ಅರ್ಜಿಸಿಕೊಂಡಿರೋ ಕಲಾನುಭವ ಅಗಾಧವಾದದ್ದು, ಅವರು ಕಂಡಂತೆ ಅವರ ಯಕ್ಷ ಬದುಕಿನ ನೋಟ ಈ ಅಂಕಣದಲ್ಲಿ ತೆರೆದುಕೊಂಡಿದೆ

ಅಂಬಾ ಪ್ರಸಾದ್ ಪಾತಾಳರು 9 ನೇ ತರಗತಿಗೆ ಶೈಕ್ಷಣಿಕ ಬದುಕಿಗೆ ವಿದಾಯ ಹೇಳಿ ನಂತರ ಯಕ್ಷಗಾನಕ್ಕೆ ಸೇರ್ಪಡೆಯಾಗುವ ನಿರ್ಧಾರ ಮಾಡುತ್ತಾರೆ. ಶಾಲಾ ಜೀವನದಲ್ಲೇ ಬಣ್ಣದ ಗೀಳು ಅಂಟಿಕೊಂಡ ಇವರಿಗೆ ತಂದೆಯವರು ಸ್ತ್ರೀ ಪಾತ್ರವೇ ಪ್ರೇರಣೆಯಾಗಿ ಇವರೂ ಸ್ತ್ರೀ ಪಾತ್ರದ ಕಡೆ ಒಲವು ತೋರುತ್ತಾರೆ. ವಿದ್ಯಾರ್ಥಿ ಜೀವನ ಮುಗಿಸಿ 1978–79 ರಲ್ಲಿ ಧರ್ಮಸ್ಥಳದಲ್ಲಿ ಗೋವಿಂದ ಭಟ್, ನಿಡ್ಲೆ ನರಸಿಂಹ ಭಟ್, ಅವರ ಮಾರ್ಗದರ್ಶನದಲ್ಲಿ ಧರ್ಮಸ್ಥಳದ ಲಲಿತ ಕಲಾಕೇಂದ್ರದಲ್ಲಿ ಆರು ತಿಂಗಳ ಕಾಲ ಯಕ್ಷಗಾನ ನಾಟ್ಯಾಭ್ಯಾಸ ಮಾಡುತ್ತಾರೆ. ನಂತರ ಅವರ ಬಣ್ಣದ ಬದುಕು ಧರ್ಮಸ್ಥಳ ಮೇಳದಲ್ಲಿ ಆರಂಭವಾಗುತ್ತದೆ. ಪೂರ್ವರಂಗದಲ್ಲಿ ಮುಖ್ಯಸ್ತ್ರೀ ವೇಷ ನಿರ್ವಹಿಸಿಕೊಂಡು ಒಂದು ವರ್ಷ ಕಳೆಯುತ್ತಾರೆ. ನಂತರ ಮೇಳ ಬದಲಾವಣೆಯ ಬಗ್ಗೆ ಅವರು ಹೀಗೆ ಹೇಳುತ್ತಾರೆ. "ಆಗಿನ ಕಾಲದಲಿ ಧರ್ಮಸ್ಥಳ ಮೇಳದಲ್ಲಿ ಹೆಚ್ಚು ವರ್ಷ ವೇಷ ಮಾಡುತ್ತಿದ್ದರೂ ಸಖಿ ವೇಷ ಬಿಟ್ಟರೆ ಮುಖ್ಯ ವೇಷಗಳು ಸಿಗುವುದು ಕಷ್ಟವಾಗಿತ್ತು. ಒಬ್ಬ ಕಲಾವಿದ ಬೆಳವಣಿಗೆಯಾಗಬೇಕಾದರೆ ಪಾತ್ರಗಳಲ್ಲಿ ಬದಲಾವಣೆಗಳಾಗಬೇಕು. ಮುಖ್ಯ ಪಾತ್ರಗಳನ್ನು ಭಾಗವತರು, ಹಿರಿಯ ಕಲಾವಿದರು ಒದಗಿಸಿಕೊಡಬೇಕಾಗುತ್ತದೆ. ಆಗ ಅದರ ತಿಳುವಳಿಕೆ ಪಡೆದುಕೊಳ್ಳಲು ಹಿರಿಯರನ್ನು ಆಶ್ರಯಿಸಿಕೊಂಡು ಹೋಗುತ್ತೇವೆ. ಈಗೆ ಕಲಾವಿದನ ಬೆಳವಣಿಗೆ ಆಗುವುದು. ಅಂತಹ ಅವಕಾಶಕ್ಕಾಗಿ ನಾನು ನಿರಂಜನ ಸ್ವಾಮಿಗಳು ಮುನ್ನಡೆಸುತ್ತಿದ್ದ ಶ್ರೀ ಅಂಬಿಕಾ ಅನ್ನಪೂರ್ಣೇಶ್ವರಿ ಮೇಳ ಸುಂಕದಕಟ್ಟೆಗೆ ಸೇರಿಕೊಂಡೆ. ಅಲ್ಲಿ ನನಗೆ ಕಟೀಲು ಶ್ರೀನಿವಾಸ ರಾವ್, ಭೀಮ ಭಟ್, ಕುಜಣ್ಣ ದೇರಣ ಶೆಟ್ರು ಮೊದಲಾದ ಹಿರಿಯ ಕಲಾವಿದರ ಒಡನಾಟ ಸಿಕ್ಕಿತು. ಬೇರೆ ಬೇರೆ ಪಾತ್ರಗಳನ್ನು ನಿರ್ವಹಿಸುವ ಅವಕಾಶ ಸಿಕ್ಕಿತು. ಭೂತರಾಜ ಕುಂಡಲೇಶ ವಿಜಯ ಪ್ರಸಂಗದಲ್ಲಿ ರಂಭೆ ಪಾತ್ರವನ್ನು ಮಾಡಿ ಬೆಳಗಿನ ಜಾವ ವಿಷ್ಣುವಿನ ಪಾತ್ರವನ್ನೂ ನೀಡುತ್ತಿದ್ದರು. ದೇವಿ ಮಹಾತ್ಮೆ ಪ್ರಸಂಗದಲ್ಲಿ ಆದಿಯಾಯೆ, ಮಾಲಿನಿ ಚಂಡ ಮುಂಡರ ಪಾತ್ರ, ಬ್ರಹ್ಮ ಮೊದಲಾದ ವೇಷ ನಿರ್ವಹಿಸಿ ಅನುಭವ ಮಾಡಿಕೊಳ್ಳಲು ಸಾಧ್ಯವಾಯಿತು. ತುಳು ಪ್ರಸಂಗದ ಅನುಭವವೂ ಆ ಮೇಳದಲ್ಲಾಯಿತು. ಬಯಲಾಟ ಮೇಳದಲ್ಲಿ ದಿನಾ ಬೇರೆ ಬೇರೆ ಪ್ರಸಂಗ ತಯಾರಾಗಬೇಕಾಗುತ್ತದೆ. ಹಿರಿ ಕಲಾವಿದರ ಒಡನಾಟದಿಂದ ಅನೇಕ ಅನುಭವಗಳನ್ನು ಪಡೆದುಕೊಂಡೆ. ಸುಂಕದಕಟ್ಟೆ ಮೇಳದಲ್ಲಿ 4 ವರ್ಷದ ತಿರುಗಾಟದ ಅವಧಿಯಲ್ಲಿ ಅಂಬಾಪ್ರಸಾದರ ಸ್ತ್ರೀ ಪಾತ್ರ ಒಳ್ಳೆಯದಾಗುತ್ತದೆ ಎಂದು ಜನ ಮಾತನಾಡುವಂತಾಯಿತು. ಈ ಮೇಳದಲ್ಲಿ ಪತಿವ್ರತೆ ವಿಮಲೆ, ಪ್ರತಾಪ ಜಯಂತಿ, ಸ್ವರ್ಗದ ಪೊಣ್ಣು, ಮೊದಲಾದ ಪ್ರಸಂಗಗಳಲ್ಲಿ ಮುಖ್ಯ ಪಾತ್ರಗಳೇ ನನಗೆ ಸಿಗ್ತಾ ಇತ್ತು. ಈ ಪಾತ್ರಗಳ ಪ್ರಸಿದ್ಧಿಯಿಂದಾಗಿ ಈ ಬೆಳವಣಿಗೆ ಮಳೆಗಾಲದಲ್ಲೂ ನನ್ನನ್ನು ಆಟಕ್ಕೆ ಕರೆಯುವಂತಾಯಿತು. ಮದ್ರಾಸ್, ಮುಂಬೈ, ಬೆಂಗಳೂರು ನಗರಗಳಲ್ಲಿ ಪ್ರದರ್ಶನ ನೀಡಲು ಅವಕಾಶ ಸಿಗುತ್ತಿತ್ತು. ಮಳೆಗಾಲದ ಟೂರ್ ಸೆಟ್ ನಲ್ಲಿ ಹೋಗುವ ಅವಕಾಶ ಸಿಕ್ಕಿತು. ಮೊದಲಿಗೆ ಕುಂಬ್ಳೆ ಸುಂದರ್ ರಾಯರು, ಶ್ರೀಧರ್ ಭಂಡಾರಿ ನಿಡ್ಲೆ ಗೋವಿಂದ ಭಟ್, ಡಿ ಮನೋಹರ್ ಕುಮಾರ್, ಇವರೊಂದಿಗೆ ತಿರುಗಾಟ ಸಿಕ್ಕಿತು. ನಂತರ ಕದ್ರಿ ಮೇಳದಲ್ಲಿ ಹೆಚ್ಚಾಗಿ ತುಳು ಪ್ರಸಂಗಗಳೇ ಆಗುತ್ತಿತ್ತು. ಅಲ್ಲಿ ಕೆಲವು ವರ್ಷ ಸೇವೆ ಸಲ್ಲಿಸಿದೆ. ಗೆಜ್ಜೆದ ಪೂಜೆ ಪ್ರಸಂಗದಲ್ಲಿ ತುಳಸಿಯ ಪಾತ್ರವನ್ನು ಮಾಡಿ ರಂಜಿಸಿದೆ. ಈ ಪಾತ್ರ ಪ್ರಸಿದ್ಧಿಯಾಗಲು ನಾನು ಕಲಿತಿದ್ದ ಭರತನಾಟ್ಯವೂ ಅನುಕೂಲವಾಯಿತು. ಈ ಪಾತ್ರ ರಂಗದಲ್ಲಿ ನಾಟ್ಯ ಮಾಡಿ ಸಾಯುವಂಥದ್ದು. ನಾನು ಭರತನಾಟ್ಯದ ನಡೆಯನ್ನು ಬಳಸಿಕೊಳ್ಳುತ್ತಿದ್ದೆ. ನಾನು ಭರತ ನಾಟ್ಯ ಕಲಿತದ್ದು ವಿಠಲ್ ಎನ್ನುವವರಲ್ಲಿ."

ಪೌರಾಣಿಕ ಪಾತ್ರಗಳೆಲ್ಲ ಹಳೆಯ ಕ್ರಮದಲ್ಲಿರಬೇಕು. ಲೌಕಿಕ ಪ್ರಪಂಚಕ್ಕೆ ಬರಬಾರದು. ತುಳು ಲೌಕಿಕವಾದದ್ದು. ರಾಮಯಣ ಭಾರತ ಭಾಗವತ ಪೌರಾಣಿಕ ನೆಲೆಯಲ್ಲಿ ನೋಡುವಂಥದ್ದು. ರಾಮಾಯಣದ ರಾವಣ – ಮಂಡೋದರಿ ಪಾತ್ರಗಳು ಹೇಗಿರ್ಬೇಕು? ಹೇಗಿರಬಹುದು ಶೂರ್ಪನಖಿ ಪಾತ್ರ ಚಿತ್ರಣ ಹೇಗೆ ರೂಪಿಸ್ಬೇಕು ಎಂಬ ಕಲ್ಪನೆ ಕಲಾವಿದ ಮಾಡಬೇಕಾಗುತ್ತದೆ. ಉದಾಹರಣೆಗೆ ಅಹಲ್ಯೆ, ಗೌತಮನನ್ನು ಮೆಚ್ಚಿ ಹೋದವಳಲ್ಲ. ದೇವೇಂದ್ರನನು ಮೆಚ್ಚಿಕೊಂಡಿದ್ದವಳು. ಈ ದ್ವಂದ್ವ, ತುಮುಲತೆ ಪಾತ್ರದಲ್ಲಿ ತೋರಿಸಬೇಕಾಗುತ್ತದೆ. ಅದೇ ರೀತಿ ದಾಕ್ಷಾಯಿಣಿ ಗಂಡನ ಪ್ರೀತಿ ಅಪ್ಪನ ಮೇಲಿನ ಪ್ರೇಮ ಹೇಗೆ ಮಾಡಿ ತೋರಿಸ್ಬೇಕು. ಎಂಬುದನ್ನು ತಿಳಿದಿರಬೇಕು. ಯಾವುದೇ ಪಾತ್ರವನ್ನಾದ್ರೂ ಮೆರೆಸ್ಬೇಕು ಅಂತಿದ್ರೆ ಆ ಪಾತ್ರದ ಒಳಗೆ ಹೋಗಲು ಗೊತ್ತಿರ್ಬೇಕು. ಅದಕ್ಕೆ

ಮಾಡಿಕೊಳ್ಳಬೇಕಾಗುತ್ತದೆ. ಶಿರಸಿ ಮಾರಿಕಾಂಬ ಮೇಳದಲ್ಲಿ ನಾನು 2 ವರ್ಷ ತಿರುಗಾಟ ನಡೆಸಿದ್ದೆ. ಆಗ ಹಗಲು ಹೊತ್ತಿನಲ್ಲಿ ಪ್ರಾಕ್ಟಿಸ್ ಮಾಡ್ತಿದ್ದೆ, ಗೋಡೆ ನಾರಾಯಣ ಹೆಗಡೆ, ಉಪ್ಪುಂದ ನಾಗೇಂದ್ರರು ಎಂ.ಎ ನಾಯಕರು ಮೊದಲಾದವರಲ್ಲಿ ಪಾತ್ರದ ನಡೆ ಆಸಕ್ತಿಯಿಂದ ಕಲಿತುಕೊಂಡೆ. ಬಡಗಿನಲ್ಲಿ ಶಂಕರ ಭಾಗವತರು ಹಗಲೆಲ್ಲ ನನ್ನನ್ನು ಕುಣಿಸಿ ತಯಾರು ಮಾಡಿ ರಂಗಕ್ಕೆ ಬಿಡ್ತಾ ಇದ್ರು, ರಂಗದಲ್ಲಿ ನನ್ನ ಅಭಿನಯ ಕಲಿತು ಕೊಳ್ಳುವ ರೀತಿ ನೋಡಿ ನೀನು ಚೆನ್ನಾಗಿ ತಯಾರಾಗುತ್ತಿದ್ದೀಯ ಎಂದು ಹೇಳುತ್ತಿದ್ರು.

***ಈಗಿನ ಕಲಾವಿದರಲ್ಲಿ ಪಾತ್ರದ ಬಗ್ಗೆ ಪೂರ್ವ ತಯಾರಿ***


ಪ್ರಸ್ತುತ ಕುಣಿತದ ವಿಭಾಗ ಬೆಳವಣಿಗೆ ಆಗಿದೆ. ಕಲಾವಿದರು ಪಾತ್ರದಲ್ಲಿ ತಲ್ಲೀನತೆ ಆಗುವುದಿಲ್ಲ. ತುಂಬ ಕುಣಿದಾಗ ಏದುಸಿರು ಬರ್ತದೆ. ಮಾತನಾಡುವಾಗ ಆ ಭಾವನೆ ಉಳಿಯುವುದಿಲ್ಲ. ದಣಿದಿರುವಾಗ ಒಟ್ಟು ಮಾತಾಡಿಕೊಂಡು ಹೋಗ್ತೇವೆ. ಕುಣಿತದಿಂದ ಪ್ರೇಕ್ಷಕರನ್ನು ಮೆಚ್ಚಿಸ್ತೋದು. ಆದರೆ ಮಾತಿನಲ್ಲಿ ಭಾವ ತುಂಬಲಾಗುವುದಿಲ್ಲ.

ಉತ್ತಮ ಕಾಲ್ಪನಿಕ ಕಥೆ ದೀರ್ಘ ಕಾಲ ಜನಮಾನಸದಲ್ಲಿ ಉಳಿಯುತ್ತದೆ. ಗೆಜ್ಜೆದ ಪೂಜೆ ಪ್ರಸಂಗ ಇಂದಿಗೂ ಜೀವಂತವಾಗಿ ಉಳಿದಿದೆ. ನಾನು ಮಾಡುತ್ತಿದ್ದ ತುಳಸಿಯ ಪಾತ್ರ ಬೇರೆಯವರು ಮಾಡ್ತಾ ಇರ್ತೋದು. ಆದ್ರೆ ಪಾತ್ರದ ಗಟ್ಟಿತನ ನನ್ನನ್ನು ಇಂದಿಗೂ ಜನ ಆ ಪಾತ್ರಕ್ಕೆ ನನ್ನನ್ನು ಗುರುತಿಸುವಂತೆ ಮಾಡಿದೆ. ಇತ್ತೀಚಿಗೆ ಆಂಗಿಕ ಮಾತು ಹಾವಭಾವ ಕುಣಿತದ ಬದಲಾವಣೆಗಳು ಆಗ್ತಾ ಇದೆ. ಬದಲಾವಣೆ ತಪ್ಪು ಎಂದು ನಾನು ಹೇಳುವುದಲ್ಲ. ಅಂತಿಮವಾಗಿ ಪ್ರೇಕ್ಷಕರಿಗೆ ಮೆಚ್ಚಿಸುವುದೇ ಉದ್ದೇಶ. ಹಳೆಯ ಮಟ್ಟನ್ನು ಉಳಿಸಬೇಕು ಎನ್ನುವುದಾದರೆ ಹಳೆಯ ಪರಂಪರೆಯನ್ನೇ ಮುಂದುವರೆಸಿಕೊಂಡು ಬರಬೇಕು. ಬೆಳವಣಿಗೆ ಬದಲಾವಣೆ ಬೇಕಂತಾದರೆ ಈಗಿನ ಬದಲಾವಣೆಯನ್ನು ಮುಂದೆ ತೆಗೆದುಕೊಂಡು ಹೋಗಬೇಕು. ರಂಗದಲ್ಲಿ ನಾನೂ ಬಹಳಷ್ಟು ಬದಲಾವಣೆ ಮಾಡಿಕೊಂಡವನೇ. ನಮ್ಮ ತಂದೆಯವರ ಮೋಹಿನಿ ಕಯಾದು ಪಾತ್ರಗಳನ್ನು ನೋಡಿದ್ದೇನೆ. ಆದರೆ ನನ್ನ ನಿರ್ವಹಣೆಯಲ್ಲಿ ನಾನು ಬದಲಾವಣೆ ಮಾಡಿಕೊಂಡಿದ್ದೇನೆ.

ತಂದೆಯ ಪಾತ್ರಗಳೊಂದಿಗೆ ನನ್ನ ಪಾತ್ರಗಳನ್ನು ಹೋಲಿಕೆ ಮಾಡಿಕೊಂಡಾಗ ಅದೆಷ್ಟೋ ಪಾತ್ರಗಳನ್ನು ಅವರಷ್ಟು ಉತ್ತಮವಾಗಿ ನಿರ್ವಹಿಸಲು ಸಾಧ್ಯವಾಗದೇ ಇರುವುದೂ ಇದೆ. ಹಾಗೆಯೇ ಅವರಿಗಿಂತಲೂ ಉತ್ತಮ ನಿರ್ವಹಣೆ ಮಾಡಿದ ಪಾತ್ರಗಳೂ ಇವೆ. ಒಂದು ಪಾತ್ರವನ್ನು ಬೇರೆ ಬೇರೆ ಕಲಾವಿದರು ಮಾಡಿದಾಗ ಪ್ರತಿಯೊಬ್ಬರಲ್ಲೂ ವ್ಯತ್ಯಾಸ ಇದೆ. ಒಬ್ಬ ಮಾಡಿದ ಹಾಗೆ ಇನ್ನೊಬ್ಬ ಕಲಾವಿದ ಮಾಡಲು ಸಾಧ್ಯವಿಲ್ಲ. ಕೆಲವು ಪಾತ್ರಗಳನ್ನು ತಂದೆಯವರೇ ಹೊಗಳಿದ್ದೂ ಇದೆ. ಅಷ್ಟೊಂದು ಚೆನ್ನಾಗಿ ನಿರ್ವಹಿಸದೇ ಹೋದಾಗ ವಿಮರ್ಶೆ ಮಾಡಿದ್ದೂ ಇದೆ. ನಮ್ಮ ತಂದೆ ವೆಂಕಟರಮಣ ಪಾತಾಳರ ಮೋಹಿನಿಯ ಪಾತ್ರ ಅತ್ಯುತ್ತಮ ನಿರ್ವಹಣೆ. ಆ ಪಾತ್ರದಿಂದಾಗಿ ಅವರಿಗೆ ನಾಗಕನ್ನಿಕೆ ಎಂಬ ಬಿರುದು ಬಂದಿತ್ತು. ಆದರೆ ನನ್ನ ಮೋಹಿನಿಯ ಪಾತ್ರ ಅವರಷ್ಟು ಚೆನ್ನಾಗಿ ಬರುವುದಿಲ್ಲ ಎಂದು ಕೆಲವರು ಹೇಳುವುದಿದೆ. ಹಾಗೆಂದು ಏನೂ ಇಲ್ಲದ ನಿರ್ವಹಣೆಯಲ್ಲ. ಭರತನಾಟ್ಯ ಕಲಿತದ್ದರಿಂದ ನಾಟ್ಯ ಕುಣಿತ ತುಂಬ ಚೆನ್ನಾಗಿ ಮಾಡುತ್ತಿದ್ದೆ." ಇದು ಅಂಬಾ ಪ್ರಸಾದ್ ಪಾತಾಳರ ಕಲಾಜೀವನದ ಬಗ್ಗೆ ಅವರ ಮಾತುಗಳು.

ಕಲಾವಿದರ ಸಾಧನೆಗೆ ಗೌರವ ಸಲ್ಲಿಸುವ ಉದ್ದೇಶದಿಂದ ಅಂಬಾಪ್ರಸಾದರ ತಂದೆಯವರಾದ ಪಾತಾಳ ವೆಂಕಟರಮಣ ಭಟ್ ಅವರ ಹೆಸರಿನಲ್ಲಿ ಪಾತಾಳ ಪ್ರಶಸ್ತಿಯನ್ನು ನೀಡುತ್ತಾ ಬಂದಿದ್ದಾರೆ. ವೆಂಕಟರಮಣ ಪಾತಾಳರ 7 ನೇ ವಯಸ್ಸಿನಲ್ಲಿ ಅವರ ಹೆಸರಿನಲ್ಲಿ ಪ್ರಶಸ್ತಿ ನೀಡಬೇಕೆಂದು ಎಡನೀರು ಸ್ವಾಮೀಜಿಯವರ ಸೂಚನೆಯಂತೆ ಅವರಿಗೆ ಬಂದ ಸನ್ಮಾನ ಭಕ್ಷೀಸು ಹಾಗೂ ಸಂಪಾದನೆಯ ಕೂಡಿಟ್ಟ ಭಾಗವನ್ನು ಕಲಾವಿದರಿಗೆ ಗೌರವ ಸಮರ್ಪಣೆಯ ಮೂಲಕ ಸಲ್ಲಿಸುತ್ತಿದ್ದಾರೆ. ಪುತ್ತೂರು ನಟರಾಜ ವೇದಿಕೆಯಲ್ಲಿ ಪ್ರಾಂಭವಾಗಿದ್ದ ಈ ಕಾರ್ಯಕ್ರಮದಲ್ಲಿ ಇಲ್ಲಿಯವರೆಗೆ ಸುಮಾರು 15ಕ್ಕೂ ಮಿಕ್ಕಿ ಕಲಾವಿದರಿಗೆ ಸಂಭಾವನೆಯೊಂದಿಗೆ ಪ್ರಶಸ್ತಿ ನೀಡಲಾಗಿದೆ. ಇತ್ತೀಚಿಗೆ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ನಡೆದ ಭಜನಾ ಕಮ್ಮಟದಲ್ಲಿ ಅರ್ಹ ಕಲಾವಿದರಿಗೆ ಪಾತಾಳ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

## ದಯಾನಂದ ನಾಗೂರು


ರುಕ್ಮಿಣಿಯಾಗಿ ನಾಗೂರು ದಯಾನಂದ ಬಳೆಗಾರ (ಬಡಗುತಿಟ್ಟು).

ನಾಜೂಕಿನ ಸ್ತ್ರೀ ವೇಷಧಾರಿಯೆಂದೇ ಗುರುತಿಸಿಕೊಂಡಿದ್ದ ಬಡಗು ತಿಟ್ಟಿನ ಹಿರಿಯ ಕಲಾವಿದ ದಯಾನಂದ ನಾಗೂರು ಅವರ ಯಕ್ಷ ಬದುಕಿನ ಮೆಲುಕು ಮಾತುಗಳಾಗಿ ಮೂಡಿ ಬಂದಿದ್ದು ಹೀಗೆ.

ಉಡುಪಿ ಜಿಲ್ಲೆಯ ನಾಗೂರಿನವರಾದ ದಯಾನಂದರು 6 ನೆ ತರಗತಿ ವಿದ್ಯಾಭ್ಯಾಸ ಮಾಡಿ ನಂತರ ತಮ್ಮ 13 ನೆಯ ವಯಸ್ಸಿಗೆ ಯಕ್ಷಗಾನಕ್ಕೆ ಪಾದಾರ್ಪಣೆ ಮಾಡುತ್ತಾರೆ. ಕುಟುಂಬದಲ್ಲಿ ಕಲಾವಿದರಾಗಿ ಯಾರೂ ಗುರುತಿಸಿಕೊಂಡಿರದೇ ಇದ್ದರೂ ಇವರಿಗೆ ಯಕ್ಷಗಾನದ ಮೇಲೆ ಒಲವು ಕಾಣಿಕೊಳ್ಳುತ್ತದೆ. ಶಾಲಾ ಜೀವನ ಮುಗಿಸಿ ಜೀವನ ನಿರ್ವಹಣೆಗೆ ಯಕ್ಷಗಾನದ ಹೆಜ್ಜೆಗಾರಿಕೆ ಕಲಿತದ್ದು ಹೇರಂಜಾಲು ವೆಂಕಟರಮಣ ಗಾಣಿಗರಲ್ಲಿ. ಗುರುಗಳಿಗೆ ವಯಸ್ಸಾದಾಗ ಅವರೇ ದಯಾನಂದರನ್ನು ಮುಂದೆ ಇಡಗುಂಜಿ ಮೇಳಕ್ಕೆ ಸೇರಿಸಿ "ನಿನ್ನ ಜೀವನ ನೋಡಿಕೋ" ಎಂದು ಹರಸುತ್ತಾರೆ. ಅಲ್ಲಿ ಸುಮಾರು 8 ವರ್ಷಗಳ ಕಾಲ ಸೇವೆ ಸಲ್ಲಿಸಿ ವಿವಿಧ ಪಾತ್ರಗಳಲ್ಲಿ ಪಳಗಿ ಸಾಲಿಗ್ರಾಮ ಮೇಳಕ್ಕೆ ಸೇರ್ಪಡೆಯಾಗುತ್ತಾರೆ. ನಂತರ ಅವರಿಗೆ ಡಾ. ಶಿವರಾಮ ಕಾರಂತರ ಸಂಪರ್ಕವಾಗುತ್ತದೆ. ದಯಾನಂದರ ಚುರುಕುತನ ಕಾರಂತರಿಗೆ ಇಷ್ಟವಾಗಿಬಿಡುತ್ತದೆ. ಅಲ್ಲಿಂದ ಶಿವರಾಮ ಕಾರಂತರ ಗರಡಿಯಲ್ಲಿ ಕಲಾಪಯಣ ಮುಂದುವರೆಯುತ್ತದೆ.

ಕಾರಂತರೊಂದಿಗಿನ ಒಡನಾಟದ ಬಗ್ಗೆ ಅವರು ಹೇಳುವ ಮಾತುಗಳು – "ಶಿವರಾಮ ಕಾರಂತರು ನೃತ್ಯ ನಾಟಕ ಮಾಡ್ತಿದ್ರು. ನನ್ನ ಚುರುಕುತನ ನೋಡಿ ನನ್ನನ್ನು ಅವರ ತಂಡಕ್ಕೆ ಮಾಡಿದ್ರು. ಅವರ ತಂಡದಲ್ಲಿ ಅಮೆರಿಕ, ಕೆನಡ, ಲಂಡನ್, ರಷ್ಯ, ಜರ್ಮನಿ, ಜಪಾನ್, ಮೊದಲಾದ ಕಡೆ ಪ್ರದರ್ಶನಗಳನ್ನು ನೀಡಿದೆ. 6 ವರ್ಷ ಅವರ ಜೊತೆಯಲ್ಲಿ ಕಾಲ ಕಳೆದಿದ್ದೇನೆ. ಅವರು ನನ್ನನ್ನು ಪ್ರೀತಿಯಿಂದ ನೋಡಿಕೊಳ್ತಾ ಇದ್ರು. ಅವರು ಏನೇ ಹೇಳಿಕೊಟ್ಟರೂ ಅದನ್ನು ಕೂಡ್ಲೇ ಸ್ವೀಕಾರ ಮಾಡಿ ರಂಗಸ್ಥಳಕ್ಕೆ ಕೊಡುವ ಶಕ್ತಿ ನನಗೆ ಇತ್ತು.



ದಯಾನಂದ ನಾಗೂರು

ಯಕ್ಷಗಾನದಲ್ಲಿ ಕುಣಿತ ಅಭಿನಯ ಮಾತು ಮೂಲ ಯಕ್ಷಗಾನದ ಪರಂಪರೆ. ಆದ್ರೆ ಕಾರಂತರು ಮಾತಿನ ಅಂಶವೊಂದನ್ನು ಬೇರ್ಪಡಿಸಿದ್ರು. ಈ ಕಲಾಪ್ರದರ್ಶನದಲ್ಲಿ ನಾವು ಮಾಡುತ್ತಿದ್ದದ್ದು ನೃತ್ಯ ನಾಟಕ. ಅದರಲ್ಲೇ ನಾವು ಎಲ್ಲವನ್ನೂ ತೋರಿಸಬೇಕು. ಈ ಬಗ್ಗೆ ಸಾಕಷ್ಟು ಆಕ್ಷೇಪ ಬಂದಿತ್ತು. ಮಾತು ಇಲ್ಲದ ಮೂಕ್ ಮೇಳ ಅಂತನೇ ಜನ ಆಡಿಕೊಳ್ಳತೊಡಗಿದರು. ಆದ್ರೆ ಅದು ಹಾಗೆಯೇ ಪ್ರಸಿದ್ಧವಾಯಿತು. ಆವಾಗಲೇ ಕಾರಂತರಿಗೆ 70 ವರ್ಷ ದಾಟಿತ್ತು. ಆದರೂ ಅವರ ಉತ್ಸಾಹ ಕಂಡು ನಮಗೇ ನಾಚಿಕೆಯಾಗಬೇಕು. ಎಲ್ಲವನ್ನೂ ಹೇಳಿಕೊಡುವಾಗ ಅವರು ತಾವೇ ಕುಣಿದು ಹೇಳಿಕೊಡ್ತಿದ್ರು. ಅಂಬೆಯ ಪಾತ್ರ ನಾಜೂಕಾದ ಹುಡುಗಿ. ನಂತರ ಕೋಪಾಭಿಷ್ಟವಾದ ಹುಡುಗಿ. ವಯಸ್ಸಾಗಿದ್ದರೂ ಇಂತಹಾ ಹೆಣ್ಣಿನ ಪಾತ್ರವನ್ನು ಕಾರಂತರು ಬಳುಕಿ ಕುಣಿಯುವಾಗ ನಮಗೇ ನಾಚಿಕೆ ಆಗ್ತಿತ್ತು. ಅವರು ಪುರುಷ ಸ್ತ್ರೀ ಎಲ್ಲ ಪಾತ್ರಗಳನ್ನೂ ಮಾಡುತ್ತಿದ್ದರು. ಅವರೊಂದಿಗಿನ ಅನುಭವ ನನ್ನ ಜೀವನದ ದೊಡ್ಡ ಲಾಭ." ಎಂದವರು ಹೇಳುತ್ತಾರೆ.


ನಂತರ ಸಾಲಿಗ್ರಾಮ ಮೇಳದಲ್ಲಿ ಕಲಾ ಬದುಕನ್ನು ಮುಂದುವರೆಸಿದ ದಯಾನಂದ ನಾಗೂರರು 1993 ನೇ ಇಸವಿಯಲ್ಲಿ ಮುಂಬೈ ಪ್ರದರ್ಶನದಲ್ಲಿ ನಾಗನೃತ್ಯ ಮಾಡುತ್ತಿರಬೇಕಾದರೆ ರಂಗಸ್ಥಳದಲ್ಲಿಯೇ ಹೃದಯಾಘಾತಕ್ಕೆ ಒಳಗಾಗುತ್ತಾರೆ. ಈ ಘಟನೆಯ ನಂತರ ಕಲಾ ಬದುಕಿಗೆ ವಿದಾಯ ಹೇಳಿದ ದಯಾನಂದ ನಾಗೂರರು ಈಗ ತಮ್ಮ ಸ್ವ ಗೃಹದಲ್ಲಿ ವಿಶ್ರಾಂತ ಜೀವನವನ್ನು ನಡೆಸುತ್ತಿದ್ದಾರೆ.

ಸಾಲಿಗ್ರಾಮ ಮೇಳದಲ್ಲಿದ್ದಾಗ ಕಾಳಿಂಗ ನಾವಡರ ನಾಗಶ್ರೀ ಪ್ರಸಂಗದಲ್ಲಿ ಇವರು ದಾರಿಕೆಯಾಗಿ ಪಾತ್ರ ನಿರ್ವಹಿಸುತ್ತಿದ್ದರು. ಕಂದಾವರ ರಘುರಾಮ ಶೆಟ್ಟರ ಚೆಲುವೆ ಚಿತ್ರಾವತಿ, ಸುಗುಣೆ ಶಾಂಭವಿ, ಮೊದಲಾದ ಪ್ರಸಂಗಗಳಲ್ಲಿ ಮುಖ್ಯ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ನಳ ದಮಯಂತಿಯ ದಮಯಂತಿ, ನಳನ ಪಾತ್ರವನ್ನೂ ನಿರ್ವಹಿಸುತ್ತಿದ್ದರು. ಇಡಗುಂಜಿ ಮೇಳದಲ್ಲಿ ಸತ್ಯ ಹರಿಶ್ಚಂದ್ರ ಪ್ರಸಂಗದಲ್ಲಿ ಚಂದ್ರಮತಿಯ ಪಾತ್ರ ಲಂಕಾದಹನದ ಸೀತೆ, ಕಸೆ ವೇಷದಲ್ಲಿ, ದ್ರೌಪದಿ, ದಯಾನಂದ ನಾಗೂರರ ಇಷ್ಟದ ಪಾತ್ರಗಳು.

***ಕಾಳಿಂಗ ನಾವುಡ ರ ಬಗ್ಗೆ ಅವರ ಮಾತು..***


12 ವರ್ಷ ನಾವುಡರ ಭಾಗವತಿಕೆಯಲ್ಲಿ ಕೆಲಸ ಮಾಡಿದ್ದೆ. ಒಡನಾಡಿಗಳೊಂದಿಗೆ ಅವರು ಬಹಳ ಪ್ರೀತಿಯಿಂದ ವರ್ತಿಸುತ್ತಿದ್ದರು. ರಂಗಸ್ಥಳದ ನಿರ್ವಹಣೆಯ ಕುರಿತು ಹೇಳುವುದಾದರೆ, ನಾವಡರು ಕುಣಿಯುವವರನ್ನು ಕಂಡ್ರೆ ಕುಣಿಸ್ತಾರೆ. ಮಾತನಾಡುವ ಕಲಾವಿದ ನಾಗಿದ್ರೆ ಅದಕ್ಕೆ ಅವಕಾಶ ಕಲ್ಪಿಸಿಕೊಡುತ್ತಾರೆ. ಅಭಿನಯ ಮಾಡುವ ಕಲಾವಿದ ಆಗಿದ್ರೆ ಅಭಿನಯಕ್ಕೆ ಅವಕಾಶ ಕೊಡ್ತಿದ್ರು . ಇದು ಅವರ ದೊಡ್ಡ ಗುಣ. ಏನೂ ಗೊತ್ತಿದವನಿಗೆ ಬೇಗ ರಂಗಸ್ಥಳದಲ್ಲಿ ಕುಣಿಸಿ ಹೊರಗೆ ಹಾಕ್ತಾ ಇದ್ರು. ನಾವಡರು ತೀರಿಕೊಂಡ ಮೇಲೆ ಭಾಗವತಿಕೆಯ ಒಂದು ಮೇರು ಪರ್ವತ ಅವರಲ್ಲಿಗೆ ಮುಗಿದು ಹೋಯ್ತು. ಎಂದು ಭಾವುಕರಾಗಿ ನುಡಿಯುತ್ತಾರೆ. ದಯಾನಂದ ನಾಗೂರರಿಗೆ ಮೂರೂ ಜನ ಗಂಡು ಮಕ್ಕಳು ಹಾಗೂ ಒಬ್ಬರು ಮಗಳು. ಅವರ ಕಿರಿಯ ಪುತ್ರ ಮಾಧವ ನಾಗೂರು ರವರು ಕೂಡ ಯಕ್ಷಗಾನ ಕ್ಷೇತ್ರದಲ್ಲಿ ಸ್ತ್ರೀ ವೇಷಧಾರಿಯಾಗಿ ಗುರುತಿಸಿಕೊಂಡಿದ್ದಾರೆ.

## ನಮ್ಮ ಲೈಬ್ರರಿ – ಭಸ್ಮಾಸುರ ಮೋಹಿನಿ ಪ್ರಸಂಗ ಸಾಹಿತ್ಯ




ಭಸ್ಮಾಸುರ ಮೋಹಿನಿ ಯಕ್ಷಗಾನ ಪ್ರದರ್ಶನದಲ್ಲಿ ಬಹಳ ಪ್ರಚಲಿತದಲ್ಲಿರುವ ಪ್ರಸಂಗ ಚಿಟ್ಟಾಣಿ ರಾಮಚಂದ್ರ ಹೆಗ್ಡೆಯವರಂತಹ ಹಿರಿಯ ಕಲಾವಿದರು ತಮ್ಮ ಅದ್ಭುತ ನಟನೆಯಿಂದ ಜನಮನ ಸೂರೆಗೊಂಡ ಯಕ್ಷಗಾನ ಪ್ರಸಂಗ. ಇದು ಎರಡು ಮೂರು ತಾಸಿನ ಯಕ್ಷಗಾನ ಆಟ, ತಾಳಮದ್ದಳೆ ಕೂಟಗಳಲ್ಲಿ ಪ್ರದರ್ಶಿಸಲ್ಪಡುವ ಜನಪ್ರಿಯ ಪ್ರಸಂಗ.

ನಾನು ಈ ಪ್ರಸಂಗದ ಸಾಹಿತ್ಯದ ಬಗ್ಗೆ ಇದರ ಕವಿಗಳ ಬಗ್ಗೆ ಕೆಲವು ವಿಷಯಗಳನ್ನು ಹಂಚಿಕೊಳ್ಳುವುದು ಈ ಲೇಖನದ ಉದ್ದೇಶ. ಬೆಂಗಳೂರಿನ ಯಕ್ಷವಾಹಿನಿ ಸಂಸ್ಥೆ ಯವರ ಯಕ್ಷಗಾನಪ್ರತಿ ಸಂಗ್ರಹ ಕೋಶ ದಲ್ಲಿ ದೊರೆತ ಮಾಹಿತಿಗಳನ್ನು ಇಲ್ಲಿ ಪ್ರಸ್ತುತ ಪಡಿಸುತ್ತಿದ್ದೇನೆ. ಭಸ್ಮಾಸುರ ಮೋಹಿನಿ ಶ್ರೀ ಮದ್ಭಾಗವತದ ದಶಮ ಸ್ಕಂದದಲ್ಲಿ ಬರುವ ಕಥಾನಕ. ಈ ಪ್ರಸಂಗವನ್ನು ಹಲವು ಯಕ್ಷಗಾನ ಕವಿಗಳು ರಚಿಸಿರುವುದು ಕಂಡು ಬರುತ್ತದೆ. ಅದರಲ್ಲಿ ಕನ್ಯಾನ ವೆಂಕಟರಮಣ ಭಟ್ಟರು, ಬಲಿಪ ನಾರಾಯಣ ಭಾಗವತರು(ಹಿರಿಯ ಹಾಗೂ ಕಿರಿಯ), ಮಹಾಬಲೇಶ್ವರ ಬರವಣಿ ಗೋಕರ್ಣ, ಅಗರಿ ಶ್ರೀನಿವಾಸ ಭಾಗವತರು ಬರೆದ ಭಸ್ಮಾಸುರ ಮೋಹಿನಿ ಯಕ್ಷಗಾನ ಪ್ರಸಂಗಗಳುಬಹಳ ಜನಪ್ರಿಯ ಆಗಿವೆ . ಇವರಲ್ಲದೆ ಕಾಳಗಿ ವೀರಣ್ಣ, ಕುಂಜಿಬೆಟ್ಟು ಅನಂತಯ್ಯ, ಈಶ್ವರ ಭಟ್ ಸರ್ಪನ್ಗಳ (ಹಿಂದಿ), ಶೇಣಿ ಗೋಪಾಲ ಕೃಷ್ಣ ಭಟ್, ಬೊಟ್ಟಿಕೆರೆ ಪುರುಷೋತ್ತಮ ಪೂಂಜಾ, ಹೊಸತೋಟ ಮಂಜುನಾಥ ಭಾಗವತ, ಭಾಳಾಕ್ಷ, ವೇಲಾಪುರದ ಚೆನ್ನಕೇಶವ ಮೊದಲಾದ ಹಲವು ಕವಿವರ್ಯರು ಈ ಪ್ರಸಂಗ ಬರೆದಿರುವ ಮಾಹಿತಿ ದೊರೆಯುತ್ತಾದರೂ ಅವುಗಳ ಪ್ರತಿ ಸದ್ಯ ದೊರಕುತ್ತಿಲ್ಲ. ಕನ್ಯಾನ ವೆಂಕಟರಮಣ ಭಟ್ಟರು (1890–1955) ಬರೆದ ಭಸ್ಮಾಸುರ ಮೋಹಿನಿ ಪ್ರಸಂಗ ಪುಸ್ತಕವನ್ನು 1952ರಲ್ಲಿ ಉಡುಪಿಯ ಶ್ರೀ ಮನ್ಮಧ್ವ ಸಿದ್ಧಾಂತ ಗ್ರಂಥಾಲಯದವರು ಪ್ರಕಟಿಸಿದ್ದಾರೆ .129 ಪದ್ಯಗಳಿಂದ ಕೂಡಿದ ಈ ಪುಸ್ತಕ ಬಹಳ ಜನಪ್ರಿಯ ಗೊಂಡು 1954 ರಲ್ಲಿ ಅದೇ ಪ್ರಕಾಶನದಿಂದ 1000 ಪ್ರತಿಗಳ ಎರಡನೇ ಮುದ್ರಣ ಗೊಂಡಿರುವುದು ಇದರ ಜನಪ್ರಿಯತೆಯನ್ನು ತೋರಿಸುತ್ತದೆ. ಕನ್ಯಾನ ವೆಂಕಟರಮಣ ಭಟ್ಟರ ಈ ಕೃತಿಯನ್ನು 2006ರಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯವರು ಡಾ ಪಾದೇಕಲ್ ವಿಷ್ಣು ಭಟ್ಟರ ಸಂಪಾದಕತ್ವದಲ್ಲಿ ಭಾಗವತ ಪ್ರಸಂಗಗಳು ಸಂಪುಟದಲ್ಲಿ ಪ್ರಕಟಿಸಿದ್ದಾರೆ. ಈ ಸಂಪುಟದಲ್ಲಿ ಕವಿವರ್ಯರ ಬಗ್ಗೆ ಸಾಕಷ್ಟು ಮಾಹಿತಿಯನ್ನು ನೀಡಿದ್ದಾರೆ. 2007ರಲ್ಲಿ ಯಕ್ಷಗಾನ ಮಾಲಿಕೆ–1 ರಲ್ಲಿ ಕೂಡ ಕನ್ಯಾನ ವೆಂಕಟರಮಣ ಭಟ್ಟರ ಭಸ್ಮಾಸುರ ಮೋಹಿನಿ ಪ್ರಸಂಗ ಪ್ರಕಟವಾಗಿದೆ .ಈ ಎಲ್ಲ ಪ್ರಕಟಣೆಯ ಭಸ್ಮಾಸುರ ಮೋಹಿನಿ ಯಕ್ಷಗಾನ ಪ್ರಸಂಗ ಪುಸ್ತಕಗಳು ಯಕ್ಷವಾಹಿನಿಯ ಪ್ರಸಂಗ ಪ್ರತಿ ಕೋಶದಲ್ಲಿ ಲಭ್ಯವಿದ್ದು ಆಸಕ್ತರು ಉಚಿತವಾಗಿ ಅಂತರ್ಜಾಲ ಕೊಂಡಿಯ ಮೂಲಕ ಪಡೆದುಕೊಳ್ಳಬಹುದು. ಶ್ರೀ ಹರಿಕೃಷ್ಣ ಹೊಳ್ಳ ಬ್ರಹ್ಮಾವರ ಇವರು ರಂಗ ಪ್ರಯೋಗಕ್ಕಾಗಿ ಮಾಡಿದ ಕನ್ಯಾನ ವೆಂಕಟರಮಣ ಭಟ್ಟರ ಕೃತಿಯ ಸಂಕ್ಷಿಪ್ತ ಆವೃತ್ತಿ




ಕೂಡ ಇಲ್ಲಿ ಕಾಣ ಸಿಗುತ್ತದೆ. 129 ಪದ್ಯಗಳಿಂದ ಕೂಡಿದ ಕನ್ಯಾನ ಭಟ್ಟರ ಕೃತಿಯ ಛಂದಸ್ಸಿನ ಬಗ್ಗೆ ಅವಲೋಕಿಸಿದಾಗ ಯಕ್ಷಗಾನ ಪ್ರಸಂಗಗಳಲ್ಲಿ ವಿಶಿಷ್ಟವಾದ ಹಲವು ರಾಗ ತಾಳಗಳ ಸಂಯೋಜನೆಯನ್ನು ಕಾಣಬಹುದು. ಕವಿ ಈ ಪ್ರಸಂಗ ಕಾವ್ಯದಲ್ಲಿ ಶಾರ್ದೂಲ ವಿಕ್ರೀಡಿತಮ್ ಛಂದಸ್ಸಿನಲ್ಲಿ ದೇವತಾ ಪ್ರಾರ್ಥನೆಯಿಂದ ಪ್ರಾರಂಭಿಸಿ ಕಮಾಚು, ಸೌರಾಷ್ಟ್ರ ತ್ರಿವಿಡೆ, ಆನಂದ ಭೈರವಿ ಕಲ್ಯಾಣಿ ,ಶಂಕರಾಭರಣ, ಸಾರಂಗ ರೂಪಕ, ಸಾವೇರಿ, ಬಿಲಹರಿ, ದೀಪ ಕಲ್ಯಾಣಿ, ಕಾಂಭೋಜ, ಕೇದಾರ ಗೌಳ ಪಂತುರಾವಳಿ,ಸವಾಯ್, ಘಂಟಾರವ, ಆಹೇರಿ, ಭೂಪಾಳಿ, ನೀಲಾಂಬರಿ, ಮಧುಮಾಧವಿ, ಆರಭಿ ರೇಗುಪ್ತಿ, ಢವಳಾರ ಮೊದಲಾದ ವೈವಿಧ್ಯಮಯ ರಾಗಗಳನ್ನು ಬಳಸಿದ್ದಾರೆ. ಇನ್ನೂ ಅಗರಿ ಶ್ರೀನೀವಾಸ ಭಾಗವತರು ಬರೆದ ಭಸ್ಮಾಸುರ ಮೋಹಿನಿ ಪ್ರಸಂಗ 52 ಪದ್ಯಗಳಿಂದ ಕೂಡಿದ್ದು ಇದನ್ನು ಪಿ ಶ್ರೀನಿವಾಸ ಭಟ್ಟರ ಸಂಪಾದಕತ್ವದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಮಹಾರಾಷ್ಟ್ರ ಘಟಕ ಅಗರಿ ಶ್ರೀನಿವಾಸ ಭಾಗವತ ಸಂಸ್ಮರಣಾ ಪ್ರಸಂಗ ಮಾಲಿಕೆಯಲ್ಲಿ ಪ್ರಕಟಿಸಿದೆ.

ಬಲಿಪ ಕಿರಿಯ ನಾರಾಯಣ ಭಾಗವತರು 1968ರಲ್ಲಿ 112 ಪದ್ಯಗಳಿಂದ ಕೂಡಿದ ಭಸ್ಮಾಸುರ ಮೋಹಿನಿ ಪ್ರಸಂಗವನ್ನು ತಾವೇ ರಚಿಸಿ ಪ್ರಕಟಿಸಿದ್ದಾರೆ. ಇದಕ್ಕೆ ಅಳಿಕೆ ಸತ್ಯಸಾಯಿ ವಿಹಾರದ ಕೆ ವಿ ಸುಬ್ಬರಾವ ಮುನ್ನುಡಿ ಬರೆದಿದ್ದು ಇದು ಶ್ರೀ ಸತ್ಯ ಸಾಯಿ ಪ್ರೆಸ್ ವಿಟ್ಲಾದಲ್ಲಿ ಮುದ್ರಿಸಲ್ಪಟ್ಟಿದೆ. ಕವಿ ತನ್ನ ಕೃತಿಯಲ್ಲಿ ಯಕ್ಷಗಾನ ಪ್ರಸಂಗಳ ಸಾಮಾನ್ಯ ಬಳಕೆಯ ಭಾಮಿನಿ, ವಾರ್ಧಿಕ, ಕಂದ, ದ್ವಿಪದಿ, ಛಂದಸ್ಸಿನ ಜೊತೆಗೆ ನಾಟಿ, ಭೈರವಿ, ಶಂಕರಾಭರಣ, ಸುರುಟಿ, ಮಾರವಿ, ಬೇಹಾಗ್ ಸಾಂಗತ್ಯ, ಕಾಂಭೋದಿ, ಪಂತುರಾವಳಿ, ಬೇಗಡೆ, ನೀಲಾಂಬರಿ, ಆರ್ಯ ಸವಾಯ್, ಪಂಚಾಗತಿ, ಮಧ್ಯಮಾವತಿ, ಸೌರಾಷ್ಟ್ರ, ಕಮಾಚು, ಬಿಲಹರಿ, ಯಮುನಾ, ಕಲ್ಯಾಣಿ, ದೇಶೀ, ಹನುಮ ತೋಡಿ, ಢವಳ, ಭೂಪಾಳಿ ಮೊದಲಾದ ರಾಗಗಳನ್ನು ಬಳಸಿ ಯಕ್ಷಾಗಾನ ಪ್ರದರ್ಶನಕ್ಕೆ ಯೋಗ್ಯವಾದ ಪ್ರಸಂಗ ರಚಿಸಿದ್ದಾರೆ

ಹಿರಿಯ ಬಲಿಪ ನಾರಾಯಣ ಭಾಗವತರು ಬರೆದ ಭಸ್ಮಾಸುರ ಮೋಹಿನಿ ಪ್ರಸಂಗ 62 ಪದ್ಯಗಳಿಂದ ಕೂಡಿದೆ. ಮಹಾಬಲೇಶ್ವರ ಬರವಣಿ, ಯಕ್ಷಗಾನ ಕಲಾವಿದರು ಗೋಕರ್ಣ ಇವರು ಮಾರ್ಚ್ 2000 ರಲ್ಲಿ ತಮ್ಮ 31ನೆ ಕೃತಿ ಕುಸುಮವಾಗಿ ಭಸ್ಮಾಸುರ ಮೋಹಿನಿ ಪ್ರಸಂಗವನ್ನು ಆನಂದ ಮುದ್ರಣಾಲಯ ಗೋಕರ್ಣದಲ್ಲಿ ಮುದ್ರಿಸಿ ಪ್ರಕಟಿಸಿದ್ದಾರೆ. ಮಹಾಬಲೇಶ್ವರ ಬರವಣಿ ಅವರ ಪ್ರಸಂಗ ಸುಮಾರು 140 ಪದ್ಯಗಳಿಂದ ಕೂಡಿದ್ದು ಯಕ್ಷಗಾನ ಸಾಹಿತ್ಯ ಪ್ರಿಯರ ಮನ ಸೆಳೆಯುವ ಕೃತಿಯಾಗಿದೆ. – ***ಉಮೇಶ ಶಿರೂರು, ಬೆಂಗಳೂರು, ದೂರವಾಣಿ 9448353910***

## ಮರಕಡ ಗಣೇಶೋತ್ಸವ ಶೋಭಾಯಾತ್ರೆಗೆ ಶೋಭೆ ತಂದ ಯಕ್ಷಗಾನದ ವಿಶಿಷ್ಟ ವಿನೂತನ ಪ್ರಯೋಗ




ಬದಲಾಗುತ್ತಿರುವ ಕಾಲಘಟ್ಟದಲ್ಲಿ ಯಕ್ಷಗಾನದ ಪಾರಂಪರ್ಯವು ಬದಲಾಗುತ್ತಿರುವುದು ಸಹಜ. ಯಕ್ಷಗಾನದ ಪಿತಾಮಹ ಪಾರ್ತಿಸುಬ್ಬರ ಕಾಲದಿಂದ ಈ ಕಾಲದವರೆಗೂ ಬದಲಾವಣೆಗಳನ್ನು ಕಂಡುಕೊಂಡು ಬಂದರೂ ಯಕ್ಷಗಾನದ ಮೂಲ ಸೊಗಡನ್ನು ಉಳಿಸಿಕೊಂಡು ಮುಂದುವರಿಯುತ್ತಿದೆ ಈ ರಮ್ಯಾದ್ಭುತ ಕಲೆ. ರಾತ್ರಿಯ ಝುಗಮಗಿಸುವ ಬೆಳಕಿನಲ್ಲಿ ಭಾಗವತರ ಸ್ವರ ಲಾಲಿತ್ಯ ಚೆಂಡೆ ಮದ್ದಳೆಯ ನಿನಾದ ಗೆಜ್ಜೆಯ ಝೇಂಕಾರದೊಂದಿಗೆ ರಂಗುರಂಗಿನ ರಂಗಸ್ಥಳದಲ್ಲಿ ಅನಾವರಣಗೊಳ್ಳುವ ಯಕ್ಷಗಾನ ಅದೆಷ್ಟೋ ಇರುಳನ್ನು ಬೆಳಕಾಗಿಸಿದೆ. ಯಕ್ಷಗಾನ, ತಾಳಮದ್ದಲೆ, ಯಕ್ಷ ಗಾನ–ವೈಭವ, ಯಕ್ಷ ಗಾನಾಮೃತ, ಯಕ್ಷ ನಾಟ್ಯ ವೈಭವ, ಯಕ್ಷ ಹಾಸ್ಯ ವೈಭವ ಹೀಗೆ ನಾನಾ ರೂಪಗಳಲ್ಲಿ ಯಕ್ಷಗಾನವನ್ನ ಆಸ್ವಾದಿಸಿದ ನಾವು ಕಾಲಮಿತಿ ಯಕ್ಷಗಾನವನ್ನು ಕಂಡವರಿದ್ದೇವೆ. ಯಕ್ಷಗಾನದಲ್ಲಿ ಹೊಸತನವನ್ನು ಪ್ರಯೋಗಿಸಿ ಕಲೆಯ ರಸದೌತಣವನ್ನು ಕಲಾರಸಿಕರಿಗೆ ಉಣಬಡಿಸುವ ಅದೆಷ್ಟೋ ಕಲಾವಿದ ಕಲಾಸಂಘಟಕರಲ್ಲಿ ಒಬ್ಬರಾದ ಯಕ್ಷರಂಗದ ಯುವ ಕಲಾವಿದ, ಯಕ್ಷಗುರು ಸಂದೇಶ್ ಮರಕಡ ಇವರ ಹೊಸ ಕಲ್ಪನೆ ಯಕ್ಷ ಮಾತೆಯ ಮುಕುಟದ ಕಿರೀಟಕ್ಕೆ ಹೊಸ ಮೆರುಗು ನೀಡಿತು.

ಹತ್ತೂರ ಯಕ್ಷ ರಸಿಕರು ರಂಗಸ್ಥಳ ಇದ್ದಲ್ಲಿಗೆ ಬಂದು ಯಕ್ಷ ರಸಸ್ವಾದನೆ ಮಾಡುವುದು ರೂಢಿ. ಆದರೆ ಮರಕಡ ಗಣೇಶೋತ್ಸವ ದಲ್ಲಿ ಹತ್ತೂರ ಕಲಾ ರಸಿಕರಿದ್ದಲ್ಲಿಗೆ ರಂಗಸ್ಥಳವೇ ಚಲಿಸಿ ಕಲಾರಸಿಕರ ಮನತಣಿಸಿದ್ದು ನಿಜಕ್ಕೂ ಶ್ಲಾಘನೀಯ. ಹಾಗೂ ಸಾಹಸವೇ ಸರಿ. ಮರಕಡ ಸಾರ್ವಜನಿಕ ಗಣೇಶೋತ್ಸವದ 35ನೇ ವರ್ಷದ ಸಂಭ್ರಮಕ್ಕೆ ಫಲ್ಗುಣಿ ಫ್ರೆಂಡ್ಸ್ ಮರಕಡ ಇವರ ಪ್ರಾಯೋಜಕತ್ವದ ತಂಡವೊಂದು ಶೋಭಾಯಾತ್ರೆಗೆ ಏನಾದರೂ ಸಂದೇಶ ನೀಡುವ ಟ್ಯಾಬ್ಲೋ ನೀಡಬೇಕೆಂದು ಚಿಂತಿಸುವಾಗ ಅಡಿ ಮುಂದಿಟ್ಟವರೆ ಸಂದೇಶ್ ಮರಕಡ. ಯಕ್ಷಗಾನದ ಕಲಾಸೇವೆಯೊಂದಿಗೆ ಯಕ್ಷಮಿತ್ರರು(ರಿ) ಪೊರ್ಕೋಡಿ ಪೇಜಾವರ. ಇಲ್ಲಿಯ ತನ್ನ ಶಿಷ್ಯಂದಿರನ್ನ ಸಿದ್ಧಗೊಳಿಸಿ ಚಲಿಸುವ ಆರು ಚಕ್ರದ ವಾಹನದ ಬೆನ್ನಿಗೆ (ಟ್ಯಾಬ್ಲೊ) ನಾಲ್ಕು ಕಂಬಗಳಿಂದ ರಂಗಸ್ಥಳವೆಂಬ ದೇವಲೋಕ ಸೃಷ್ಟಿಸಿ ಚಿಣ್ಣರ ಮೊಗಕೆ ಬಣ್ಣ ಬಳಿದು ಒಂದಷ್ಟು ಅನುಭವಿ ಕಲಾವಿದರ ಜತೆಗೂಡಿ, ಯಕ್ಷಲೋಕದಲಿ ವಿಜೃಂಭಿಸಿದ ದೇವಿ ಮಹಾತ್ಮೆಯ ಮಹಿಷ ಮರ್ಧಿನಿ ಆಖ್ಯಾನವನ್ನೆ ಪ್ರಯೋಗಿಸಿ ಹೊಸ ಪ್ರಯೋಗದಲ್ಲಿ ಗೆದ್ದು ಬೀಗಿದರು.

ಈ ವಿಶಿಷ್ಟ ಪ್ರಯೋಗ ಸಾಧ್ಯವಾದೀತೆ...? ಮಕ್ಕಳು ಚಲಿಸುವ ವಾಹನದಲ್ಲಿ ಕುಣಿದಾರೆ....? ಕುಣಿದರು ಆಯ ತಪ್ಪಿದರೆ....? ಇದೆಲ್ಲ ಹೇಗಾದೀತು....? ಎಂದು ಎಲ್ಲರ ಚಿತ್ತದಲಿ ಹತ್ತಾರು ಪ್ರಶ್ನೆಗಳು ಉದ್ಭವಿಸಿದ್ದರೂ ಪೋಷಕರ ಸಹಕಾರದೊಂದಿಗೆ ಆಯ್ದ ಶಿಷ್ಯಂದಿರ ಮನಸಿನಲ್ಲಿ ಧೈರ್ಯ ತುಂಬಿ ಟ್ಯಾಬ್ಲೋದಲ್ಲಿ ಭರ್ಜರಿ ಪ್ರದರ್ಶವನ್ನೇ ನೀಡಿದರು. ಚಿಟ ಪಟ ಮಳೆಯೊಂದಿಗೆ ನಿಧಾನವಾಗಿ ಸಾಗಿದ ಚಲಿಸುವ ರಂಗಸ್ಥಳ ಭಾಗವತರ ಅಂಬುರುಹದಳ ಪದ್ಯಕ್ಕೆ ಪ್ರಾರಂಭವಾಗಿ ಮಹಿಷ ವಧೆಯವರೆಗೆ ಸುತ್ತ ನೆರೆದ ಜನಮಾನಸ ರೋಮಾಂಚನಗೊಳ್ಳುವಂತೆ ಮಾಡಿತು. ಚಿಣ್ಣರ ದಿಗಿಣ, ಮಹಿಷನ ಅಬ್ಬರ, ಶ್ರೀದೇವಿಯ ಸಾಕ್ಷಾತ್ಕಾರ ಹಿಮ್ಮೇಳದ ತಾಳಕ್ಕೆ ಮಳೆಯಲ್ಲಿ ನೆನೆದ ನೆರೆದ ಜನಸಂದಣಿ ದೇವಿಯ ಮಹತ್ಮೆಯನ್ನು ಕಂಡು ಪುಳಕಿತರಾಗಿದು ಸುಳ್ಳಲ್ಲ.

***ತುಳುನಾಡ ಬೊಳ್ಳಿ ಪದ್ಮನಾಭ ಮರಕಡ (ರಂಗಭೂಮಿ ಕಲಾವಿದ)***